# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ




ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಡಾ.ಮೋಹನ್ ಭಾಗವತ್ ಅವರು ಛತ್ತೀಸ್‌ಗಡದ ಸುರ್ಗುಜಾದಲ್ಲಿನ ಅಂಬಿಕಾಪುರದಲ್ಲಿ 'ಏಕತ್ರೀಕರಣ' ಕಾರ್ಯಕ್ರಮದಲ್ಲಿ ಸ್ವಯಂಸೇವಕರನ್ನು ಉದ್ದೇಶಿಸಿ ಮಾತನಾಡಿದರು.


ಸಂಪುಟ : 44 ಸಂಚಿಕೆ : 16 ಮಾರ್ಗಶಿರ – ಪುಷ್ಯ ಕಲಿಯುಗಾಬ್ದ 5124 01–12–2022 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4


## ಇಸ್ಲಾಮಿನ ಪರೋಕ್ಷ ಷಡ್ಯಂತ್ರ – ಲವ್ ಜಿಹಾದ್!

ಲವ್ ಜಿಹಾದ್! ಇತ್ತೀಚೆಗೆ ಸಮಾಜದ ಮುಖ್ಯವಾಹಿನಿಯಲ್ಲಿ ಚರ್ಚೆಯಾಗುತ್ತಿರುವ ವಿಚಾರ. ನಿಜಕ್ಕೂ ಹಾಗೆ ಲವ್ ಜಿಹಾದ್ ಎನ್ನುವುದು ನಡೆಯುತ್ತಿದೆಯಾ ಅಥವಾ ಅದೊಂದು ಕಲ್ಪಿತ ವಿಚಾರವೋ ಎಂಬುದು ಮಾಧ್ಯಮಗಳಲ್ಲಿ ದೊಡ್ಡ ಮಟ್ಟದ ಮಂಥನವೊಂದು ನಡೆಯುತ್ತಿದೆ. ಹಿಂದೂಗಳ ವಿರುದ್ಧ ಪರೋಕ್ಷವಾದ ಯುದ್ಧವೊಂದು ನಡೆಯುತ್ತಿರುವ ಲಕ್ಷಣವೂ ಹೌದು. ಇತ್ತೀಚೆಗಿನ ಕೆಲವು ಘಟನೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಪ್ರಜ್ಞಾವಂತ ಹಿಂದೂ ಸಮಾಜ ತಲೆ ತಗ್ಗಿಸುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ.

**ಘಟನೆ – 1**

ಇತ್ತೀಚೆಗಷ್ಟೇ ದೆಹಲಿಯ ಪೋಲೀಸರು ಶ್ರದ್ಧಾ ವಾಕರ್ ಎನ್ನುವ ಹಿಂದೂ ಹುಡುಗಿಯ ಹತ್ಯೆಯ ಪ್ರಕರಣವೊಂದನ್ನು ಭೇದಿಸಿದ್ದು ಆಕೆ ಮುಂಬೈನಲ್ಲಿ ಡೇಟಿಂಗ್ ಆಪ್ ಮೂಲಕ ಪರಿಚಯವಾದ ಅಫ್ತಾಬ್‌ನೊಂದಿಗೆ ಕಳೆದ ಎರಡು ಮೂರು ವರ್ಷಗಳಿಂದ ಲಿವ್–ಇನ್ ರಿಲೇಶನ್‌ನಲ್ಲಿದ್ದು ತಂದೆ ತಾಯಿಯರನ್ನು ಧಿಕ್ಕರಿಸಿ ದೆಹಲಿಯಲ್ಲಿ ನೆಲೆಸಿದ್ದಳು. ಆಕೆಯನ್ನ ಹತ್ಯೆ ಮಾಡಿ 35 ತುಂಡುಗಳನ್ನಾಗಿ ಕತ್ತರಿಸಿ, ಫ್ರಿಡ್ಜ್‌ನಲ್ಲಿಟ್ಟು, ಯಾರಿಗೂ ಅನುಮಾನ ಬಾರದಂತೆ ದೆಹಲಿಯ ಹೊರವಲಯದ ಕಾಡುಗಳಲ್ಲಿ ಎರಡೆರಡೇ ತುಂಡುಗಳಾಗಿ ವಿಲೇವಾರಿ ಮಾಡತೊಡಗಿದ್ದ. ಆಕೆಯ ಸಂಪರ್ಕ ಸಾಧ್ಯವಾಗದ ಕಾರಣ ಸ್ನೇಹಿತನೊಬ್ಬ ಆಕೆಯ ತಂದೆಯ ಮೂಲಕ ಪೋಲೀಸರಲ್ಲಿ ಪ್ರಕರಣ ದಾಖಲಿಸಿದಾಗ ಈ ದಾರುಣ ಘಟನೆ ಬೆಳಕಿಗೆ ಬಂದಿದ್ದು ದೇಶವೇ ಒಮ್ಮೆ ಬೆಚ್ಚಿ ಬಿದ್ದಿದೆ.



**ಘಟನೆ – 2**

ಲಖನೌನ ದುಬ್ಬಾಗದಲ್ಲಿ ಇತ್ತೀಚೆಗೆ ನಿಧಿ ಗುಪ್ತಾ ಎನ್ನುವ ಹುಡುಗಿಯನ್ನು ಸುಫಿಯಾನ್ ಎನ್ನುವ ಮುಸಲ್ಮಾನ ಯುವಕ ಕಳೆದ ಒಂದೂವರೆ ವರ್ಷದಿಂದ ಪ್ರೀತಿಸುತ್ತಿದ್ದ. ಮದುವೆಗೆ ಮುನ್ನ ಇಸ್ಲಾಮಿಗೆ ಮತಾಂತರವಾಗುವಂತೆ ಪೀಡಿಸುತ್ತಿದ್ದ. ಸೂಫಿಯಾನ್‌ನ ಮನೆಯಲ್ಲಿ ಮತ್ತೆ ಅದೇ ವಿಚಾರಕ್ಕೆ ಜಗಳವಾಗಿದ್ದು, ನಿಧಿ ಗುಪ್ತಾ ಅಳುತ್ತಾ ಟೆರೇಸ್‌ಗೆ ಹೋಗಿರುವುದನ್ನೂ ಆತ ಹಿಂಬಾಲಿಸಿರುವುದನ್ನೂ, ಜಗಳವಾಗಿ ಆಕೆಯನ್ನ ನಾಲ್ಕನೇ ಮಹಡಿಯಿಂದ ಕೆಳಗೆ ಅಮಾನುಷವಾಗಿ ತಳ್ಳಿರುವ ಘಟನೆ ನಡೆದಿದೆ. ಬಲವಾದ ಏಟು ಬಿದ್ದು ಆಸ್ಪತ್ರೆಯಲ್ಲಿ ನಿಧಿಗುಪ್ತಾ ಕೊನೆಯುಸಿರೆಳೆದಿದ್ದಾಳೆ. ಈ ವೇಳೆ ಸೂಫಿಯಾನ್ ತಪ್ಪಿಸಿಕೊಂಡಿದ್ದ. ಆತನನ್ನು ಲಖನೌ ಪೋಲೀಸರು ಬಂಧಿಸಿದ್ದು ಮತ್ತೆ ತಪ್ಪಿಸಿಕೊಳ್ಳುವ ಪ್ರಯತ್ನದಲ್ಲಿ ಎನ್‌ಕೌಂಟರ್ ಮಾಡಿದ್ದಾರೆ.

**ಘಟನೆ – 3**

ಬಿಹಾರದ ಜೂಲಿ ಕುಮಾರಿ ಎನ್ನುವ ಮಹಿಳೆಗೆ ರಾಜ್ ರಾಜಪೂತ್ ಎನ್ನುವ ಹೆಸರಿನಲ್ಲಿ ಪರಿಚಯವಾಗಿದ್ದ ತೌಫೀಕ್ ಆಲಮ್ ಎನ್ನುವ ಮುಸಲ್ಮಾನ ಯುವಕ ಆಕೆಯನ್ನು ಮದುವೆಯಾಗಿದ್ದ. ಮದುವೆಯಾದ ನಂತರ ಆತನ ಸಹೋದರಿಯ ಮನೆಗೆ ಹೋದಾಗ ಈತ ಮುಸಲ್ಮಾನ ಎಂದು ತಿಳಿದ ಜೂಲಿಗೆ ಇಸ್ಲಾಂ ಮತಕ್ಕೆ ಮತಾಂತರವಾಗುವಂತೆ ಪೀಡಿಸುತ್ತಿದ್ದ. ಅಲ್ಲದೆ, ಹಿಂದೂ ಪೂಜಾ ಪದ್ಧತಿಯನ್ನು ಅನುಸರಿಸಲು ಬಿಡದೆ ನಮಾಜ್ ಮಾಡುವಂತೆ, ಮುಸಲ್ಮಾನ ಮಹಿಳೆಯಂತೆ ಬಟ್ಟೆ ಧರಿಸಲು ಒತ್ತಾಯ ಮಾಡಿದ್ದಾನೆ. ಅಲ್ಲದೆ ಈಗಾಗಲೇ ಮದುವೆಯಾಗಿರುವ ತೌಫೀಕ್ ಆಲಂಗೆ ಮೊದಲ ಮದುವೆಯ ಮೂಲಕ ಈಗಾಗಲೇ ಹನ್ನೊಂದು ವರ್ಷದ ಮಗಳೂ ಇದ್ದಾಳೆ ಎಂದು ತಿಳಿದು ಬಂದಿದೆ. ವಿಚ್ಛೇದನಕ್ಕೆ ಕೇಳಿದಾಗ ಆಕೆಯನ್ನೂ ಆಕೆಯ ಪರಿವಾರವನ್ನು ಕೊಲ್ಲುವ ಬೆದರಿಕೆ ಹಾಕಿದ್ದಾನೆ ಎನ್ನಲಾಗಿದ್ದು ಬಿಹಾರದ ಕಥಿಯಾರ್‌ನ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೂರೂ ಘಟನೆಗಳು ಅತ್ಯಂತ ದಾರುಣವಾದ ಘಟನೆಗಳು. ಇವುಗಳನ್ನು ಬಿಡಿಬಿಡಿಯಾಗಿ ನೋಡಿದರೆ ಕೇವಲ ವೈಯಕ್ತಿಕ ಅಪರಾಧ ಪ್ರಕರಣಗಳಂತೆ ಕಂಡರೂ ಒಟ್ಟಾಗಿ ನೋಡಿದಾಗ ಈ ರೀತಿಯ ಪ್ರಕರಣಗಳ ಒಟ್ಟು ಬೆಳವಣಿಗೆಗಳು ಹಿಂದೂಗಳಿಗೆ ಆಘಾತಕಾರಿಯಾಗಿವೆ.



ಭಾರತದ ಮುಸಲ್ಮಾನ ಸಮಾಜದಲ್ಲಿ ಹೆಚ್ಚುತ್ತಿರುವ ಪ್ರತಿಗಾಮಿ ಮಾನಸಿಕತೆಯ ಜಿಹಾದ್‌ನ ಒಟ್ಟಾರೆ ದೃಷ್ಟಿಕೋನವು ಈ ಘಟನೆಗಳ ಮೂಲಕ ಅಂದಾಜಾಗಬಹುದು. ಮುಸಲ್ಮಾನ ಪುರುಷರು ಮುಸಲ್ಮಾನೇತರ ಸಮುದಾಯದ ಹೆಣ್ಣುಮಕ್ಕಳನ್ನ ಪ್ರೀತಿಯ ಸೋಗಿನಲ್ಲಿ, ಮದುವೆಯ ಹೆಸರಿನಲ್ಲಿ ಇಸ್ಲಾಮಿಗೆ ಮತಾಂತರ ಮಾಡಿಸುತ್ತಿರುವ ಈ ಮಾದರಿಯನ್ನ ಲವ್ ಜಿಹಾದ್ ಎನ್ನಲಾಗುತ್ತಿದೆ. ಸುಮಾರು 2009ರಿಂದ ಆಸುಪಾಸಿನಲ್ಲಿ ಕರ್ನಾಟಕ ಕೇರಳದಲ್ಲಿ ಈ ರೀತಿಯ ಘಟನೆಗಳು ಬೆಳಕಿಗೆ ಬಂದವು.

ಯಾವುದೇ ಅಂಶಗಳು ಇಸ್ಲಾಮಿನ ಹೊರಗಿದ್ದರೆ ಅವುಗಳನ್ನು ಇಸ್ಲಾಮಿನ ಪರಿಧಿಯ ಒಳಗೆ ತರಲು ಮಾಡುವ ಎಲ್ಲ ಅಪರಾಧಗಳೂ ಕೂಡ ಜಿಹಾದ್‌ನ ಅಡಿಯಲ್ಲಿ ನಡೆಸಲಾಗುತ್ತಿದೆ. ಇಸ್ಲಾಮನ್ನು ನಂಬದವರನ್ನು ಕಾಫೀರರೆಂದು ಕರೆಯುತ್ತಾ ಅವರನ್ನು "ಒಂದೋ ಇಸ್ಲಾಮಿಗೆ ಮತಾಂತರಿಸಬೇಕು ಇಲ್ಲವೇ ಅವರನ್ನು ಕೊಲ್ಲಬಹುದು" ಎಂದು ಇಸ್ಲಾಂ ಹೇಳುತ್ತದೆ. (ಸುರಾ 9:5)ಅಂದರೆ ಮೇಲಿನ ಘಟನೆಗಳಲ್ಲೆಲ್ಲಾ ಎರಡು ಅಂಶಗಳು ಸಮಾನವಾಗಿ ಕಾಣುತ್ತದೆ. ಒಂದು ಆ ಎಲ್ಲ ಘಟನೆಗಳಲ್ಲಿ ಸತ್ತ/ಶೋಷಣೆಗೊಳಗಾದವರು ಕಾಫಿರ್. ಅಂದರೆ ಇಸ್ಲಾಮಿನಲ್ಲಿ ನಂಬಿಕೆಯಿಲ್ಲದವರು. ಹೀಗಾಗಿ ಇಸ್ಲಾಮಿನ ಪ್ರಕಾರ ಈ ಎಲ್ಲ ಘಟನೆಗಳಲ್ಲಿಯೂ ಕೂಡ ಕಾಫಿರರನ್ನು ಕೊಲ್ಲಲು ಅನುಮತಿ ನೀಡುತ್ತದೆ. ಅಂದರೆ ಇದೊಂದು ಜಿಹಾದ್‌ನ ಭಾಗವಾಗಿ ನಡೆದಿರುವಂಥದ್ದು.

ಸುಪ್ರಿಂ ಕೋರ್ಟಿನ ವಕೀಲೆ ಹಾಗೂ ಲೇಖಕಿ ಮೋನಿಕಾ ಅರೋರಾ ತಮ್ಮ ಪುಸ್ತಕ 'love jihad or predatory dawah?' ಪುಸ್ತಕದಲ್ಲಿ ಬರೆಯುತ್ತಾ "ಮುಸಲ್ಮಾನರೊಂದಿಗೆ ನಿಖಾ ಮಾಡಿಕೊಂಡ ಹಿಂದೂ ಮತ್ತು ಕ್ರಿಶ್ಚಿಯನ್ ಹೆಣ್ಣುಮಕ್ಕಳ ಕುರಿತಾಗಿ ಸಂಗ್ರಹಿಸಿದ ಮಾಹಿತಿಯನ್ನ ನೋಡಿದಾಗ ಒಂದೋ ಅದು ಕಾನೂನಾತ್ಮಕ ವಿಚ್ಛೇದನ ಅಥವಾ ದೂರವಾಗುವಿಕೆಯಲ್ಲಿ ಕೊನೆಗೊಳ್ಳುತ್ತಿದೆ ಅಥವಾ ದಿನಂಪ್ರತಿ ಕೌಟುಂಬಿಕ ಹಿಂಸೆಯ ನರಕಯಾತನೆಯನ್ನು ಆ ಹೆಣ್ಣುಮಕ್ಕಳು ಅನುಭವಿಸುತ್ತಿದ್ದಾರೆ" ಎನ್ನುತ್ತಾರೆ.

ಈ ಕುರಿತಾಗಿ ಪ್ರತಿಕ್ರಿಯಿಸಿರುವ NMKRV ಕಾಲೇಜಿನ ಅಂತಿಮ ಬಿಎ ವಿದ್ಯಾರ್ಥಿನಿ ಅನನ್ಯ "ಈ ರೀತಿಯ ಘಟನೆಗಳು ನಿಜಕ್ಕೂ ಭಯ ಹುಟ್ಟಿಸುತ್ತದೆ. ಪ್ರೀತಿಯ ಹೆಸರಿನಲ್ಲಿ ಮೋಸ ಮಾಡಿ ಇಸ್ಲಾಮಿನ ಬಲೆಗೆ ಬೀಳಿಸಿಕೊಳ್ಳುವುದು ಸರಿಯಲ್ಲ. ಶಾಲಾ ಕಾಲೇಜಿನಲ್ಲಿ ನಮಗೆ ಭಾವೈಕ್ಯತೆಯ ಪಾಠ ಮಾಡುತ್ತಾರೆ. ಆದರೆ ಈ ರೀತಿಯ ಪೈಶಾಚಿಕ ಘಟನೆಗಳು ನಮ್ಮನ್ನ ಕಂಗೆಡಿಸುತ್ತದೆ." ಎನ್ನುತ್ತಾಳೆ.

ಖಾಸಗಿ ಕಂಪೆನಿಯಲ್ಲಿ ಉದ್ಯೋಗಿಯಾಗಿರುವ ಚೈತ್ರಾ ಮಾತನಾಡುತ್ತಾ, "ಲವ್ ಜಿಹಾದ್ ಬಹಳ ಅಪಾಯಕಾರಿ, ಈ ರೀತಿಯ ಘಟನೆಗಳ ಕುರಿತಾಗಿ ಹೆಣ್ಣುಮಕ್ಕಳು ಎಷ್ಟು ಜಾಗೃತೆ ವಹಿಸಿದರೂ ಸಾಲದು. ಹಿಂದೂ ಹೆಣ್ಣುಮಕ್ಕಳನ್ನೇ ಟಾರ್ಗೆಟ್ ಮಾಡಿ ಈ ರೀತಿ ಮಾಡುತ್ತಿರುವುದು ಆತಂಕದ ಬೆಳವಣಿಗೆ. ಇಂತಹ ಘಟನೆಗಳು ಮತ್ತೆ ಮರುಕಳಿಸಬಾರದು. ಲವ್ ಜಿಹಾದ್ ಎನ್ನುವುದು ಇಸ್ಲಾಮಿಗೆ ಮತಾಂತರ ಮಾಡಲು ಮುಸಲ್ಮಾನೇತರ ಸಮುದಾಯಗಳನ್ನ ಗುರಿಯಾಗಿಸಿಕೊಂಡ ಸಾಫ್ಟ್ ವೆಪನ್ ಎಂದರೆ ತಪ್ಪಾಗಲಿಕ್ಕಿಲ್ಲ. ಕರ್ನಾಟಕದಲ್ಲೇ ನಡೆದ ಅನೇಕ ಘಟನೆಗಳೂ ನಮ್ಮನ್ನು ಬೆಚ್ಚಿಬೀಳಿಸುತ್ತಿದೆ. ದೀಪ್ತಿ ಮರಿಯಮ್ ಪ್ರಕರಣದಲ್ಲಂತೂ ಆಕೆ ನೇರವಾಗಿ ಐಸಿಸ್ ಜೊತೆಗೆ ನಂಟು ಹೊಂದಿದ್ದಳು. ಇನ್ನು ಅದೆಷ್ಟೋ ಹೆಣ್ಣುಮಕ್ಕಳು ಆತ್ಮಹತ್ಯೆಯ ಹಾದಿ ತುಳಿದಿದ್ದಾರೆ" ಎನ್ನುತ್ತಾರೆ.

"ಈ ಕುರಿತು ಹಿಂದೂ ಸಂಘಟನೆಗಳು ಅತ್ಯಂತ ಚುರಾಕದ ಕಾರ್ಯನಡೆಸುತ್ತಿದ್ದರೂ ಲವ್‌ಜಿಹಾದ್‌ನ ವ್ಯಾಪಕತೆಯ ಎದುರು ಸಬಲವಾಗಿ ಹೋರಾಡಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ಸಾಮಾಜಿಕ ಜಾಲತಾಣಗಳ ಮೂಲಕ ತಾನು ಲಿಬರಲ್, ಫೆಮಿನಿಸ್ಟ್, ಓಪನ್ ಎಂದು ತೋರಿಸಿಕೊಳ್ಳುತ್ತಾ ಹಿಂದೂ ಹೆಣ್ಣುಮಕ್ಕಳನ್ನು ಟಾರ್ಗೆಟ್ ಮಾಡುವುದು ಹಾಗೂ ಒಲಿಸಿಕೊಳ್ಳುವುದು ಮಾಡುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳು, ಡೇಟಿಂಗ್ ಆಪ್‌ಗಳು ಈ ರೀತಿಯ ಘಟನೆಗಳಿಗೆ ಹೆಚ್ಚು ಸಹಾಯಕವಾಗುತ್ತಿದೆ" ಎಂದು ಕಳವಳ ವ್ಯಕ್ತಪಡಿಸುತ್ತಾರೆ ಭಜರಂಗದಳದ ಕಾರ್ಯಕರ್ತ ಶ್ಯಾಮ್ ಗೌಡ.

ಇನ್ನು ಹಿಂದೂ ಹೆಣ್ಣುಮಕ್ಕಳಲ್ಲದೆ ಕ್ರಿಶ್ಚಿಯನ್ ಹೆಣ್ಣುಮಕ್ಕಳನ್ನೂ ಟಾರ್ಗೆಟ್ ಮಾಡಲಾಗುತ್ತಿದೆ ಎಂದು ಕೇರಳದ ತಲಸ್ಸೇರಿಯ ಆರ್ಕ್ ಬಿಷಪ್ ಮಾರ್ಕ್ ಜೋಸೆಫ್ ಪಂಪ್ಲಾನಿಯವರೂ ಮಾಧ್ಯಮಗಳೆದುರು ಕಳವಳ ವ್ಯಕ್ತಪಡಿಸಿದ್ದರು. ಹಾಗೂ ಈ ರೀತಿಯ ಪ್ರಕರಣಗಳಲ್ಲಿ ಹೆಣ್ಣುಮಕ್ಕಳ ಮೇಲೆ ನಡೆಯುತ್ತಿರುವ ದೌರ್ಜನ್ಯದ ಕುರಿತಾಗಿಯೂ ವಿಷಯ ಪ್ರಸ್ತಾಪ ಮಾಡಿದ್ದರು.


2021ರಲ್ಲಿ ಕರಾವಳಿ ಹಾಗೂ ದಕ್ಷಿಣ ಕರ್ನಾಟಕದ ಕೆಲವು ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹಬ್ಬುತ್ತಿರುವ ಈ ರೀತಿಯ ಲವ್ ಜಿಹಾದ್ ಪ್ರಕರಣಗಳನ್ನು ತಡೆಯಲು ವಿಶೇಷವಾದ ಕಾನೂನು ರಚನೆಯ ಕುರಿತೂ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಮಾತನಾಡಿದ್ದರು.

ಸರಕಾರ ಯಾವುದೇ ಕಾನೂನು ತರಬಹುದು. ಆದರೆ ಸಾಮಾಜಿಕ ಜಾಗೃತಿ, ಸಾಂಸ್ಕೃತಿಕ ಪಲ್ಲಟಗಳ ಅರಿವು, ಆಧುನಿಕತೆಯ ಸೋಗಿನಲ್ಲಿ ಮುಗ್ಧವಾಗಿ ನಂಬುವ ಮನಸ್ಥಿತಿಯಿಂದ ಹೊರಬಂದಾಗ ಮಾತ್ರವೇ ಈ ರೀತಿಯ ಘಟನೆಗಳಿಗೆ ಕಡಿವಾಣ ಹಾಕಲು ಸಾಧ್ಯವಾಗುತ್ತದೆ. ಈ ರೀತಿಯ ಘಟನೆಗಳು ಸಮಾಜದಲ್ಲಿ ಶಾಂತಿಯನ್ನು ಕದಡುವುದಲ್ಲದೆ ಮಹಿಳೆಯ ಅಭ್ಯುದಯದ ಮೇಲೆಯೂ ಅತ್ಯಂತ ಗಂಭೀರ ಪರಿಣಾಮವನ್ನು ಬೀರುತ್ತದೆ.

## ಸಂಸ್ಮರಣೆ

# ಕನ್ನಾಯಿ ಲಾಲ್ ದತ್ (31ನೇ ಆಗಸ್ಟ್ 1880 – 10ನೇ ನವೆಂಬರ್ 1908)

ಕನ್ನಾಯಿ ಲಾಲ್ ದತ್ ಜನ್ಮಾಷ್ಟಮಿಯ ರಾತ್ರಿ ಬಂಗಾಳದ ಚಂದನ್ ನಗರದಲ್ಲಿರುವ ತನ್ನ ಮಾವನ ಮನೆಯಲ್ಲಿ ಜನಿಸಿದ. ಈ ಕಾರಣಕ್ಕಾಗಿಯೇ ಅವರ ಹೆಸರು ಕನ್ನಾಯಿ (ಕೃಷ್ಣ) ಎಂದಾಗಿದ್ದು. ಅವರ ಮನೆಯ ಹೆಸರು ಸರ್ವತೋಶ್. ಚಂದನ್ ನಗರವು ಆಗ ಫ್ರೆಂಚ್ ವಸಾಹತು ಪ್ರದೇಶವಾಗಿತ್ತು. ವಾಸ್ತವವಾಗಿ, ಅವರ ಪೂರ್ವಜರ ಮನೆ ಬಂಗಾಳದ ಶ್ರೀ ರಾಂಪೂರ್‌ನಲ್ಲಿತ್ತು. ಕನ್ನಾಯಿಗೆ ನಾಲ್ಕು ವರ್ಷ ವಯಸ್ಸಾಗಿದ್ದಾಗ, ಅವರ ತಂದೆ ಅವರೊಂದಿಗೆ ಬಾಂಬೆಗೆ ತೆರಳಿದರು. ಐದು ವರ್ಷಗಳ ಕಾಲ ಬಾಂಬೆಯಲ್ಲಿ ವಾಸಿಸಿದ ನಂತರ, ಅವರು ತಮ್ಮ ಒಂಬತ್ತನೆಯ ವಯಸ್ಸಿನಲ್ಲಿ ಚಂದನ್ ನಗರಕ್ಕೆ ಮರಳಿದರು. ಹೀಗೆ ಮೊದಲಾಗಿ ವಿಶ್ವವಿದ್ಯಾಲಯದ ಸ್ತರಕ್ಕೂ ಅವರ ಶಿಕ್ಷಣ ನಡೆದದ್ದು ಅಲ್ಲಿಯೇ. ಚಂದನ್ ನಗರದ ಡುಪ್ಲ್ ಕಾಲೇಜಿನಿಂದ ಪದವಿ ಪಡೆದರು. ಅದೇ ಕಾಲೇಜಿನ ಪ್ರಾಧ್ಯಾಪಕ ಚಾರು ಚಂದ್ರರಾಯರೊಡನಿದ್ದ ಪ್ರಭಾವದಿಂದಾಗಿ ಕನ್ನಾಯಿಗೆ ಕ್ರಾಂತಿಯ ಹಾದಿಯ ಪರಿಚಯವಾಯಿತು.



ಚಂದನ್ ನಗರದಲ್ಲಿ ಕ್ರಾಂತಿಕಾರ್ಯದ ಬೀಜವನ್ನು ಬಿತ್ತಿದ ಮೊದಲಿಗರಲ್ಲಿ 'ಸಂಧ್ಯಾ' ಪತ್ರಿಕೆಯ ಸಂಪಾದಕ ಬ್ರಹ್ಮಬಾಧವ್ ಉಪಾಧ್ಯಾಯರೂ ಒಬ್ಬರು. ಕನ್ನಾಯಿ ತನ್ನ ಪ್ರಾಧ್ಯಾಪಕರ ಮೂಲಕವೇ ಬ್ರಹ್ಮಭಾಂಧವರ ಸಂಪರ್ಕಕ್ಕೆ ಬಂದದ್ದು. ಪದವಿ ಪರೀಕ್ಷೆಯ ನಂತರ ಕನ್ನಾಯಿ ಕಲ್ಕತ್ತಾಗೆ ಬಂದರು ಅಲ್ಲಿನ ಯುಗಾಂತರ್‌ನ ಕಚೇರಿಯಲ್ಲಿ ಅವರ ಕೆಲಸ ಪ್ರಾರಂಭವಾಯಿತು. ಕಲ್ಕತ್ತೆಯಲ್ಲಿ ಅವರು ಶೀಘ್ರದಲ್ಲೇ ಅನುಶೀಲನ್ ಸಮಿತಿಯೊಂದಿಗೆ ಸಂಪರ್ಕ ಹೊಂದಿದಾಗ, ಅದರ ಸದಸ್ಯರಾದರು ಮಾತ್ರವಲ್ಲದೆ ಅವರು ತಮ್ಮ ಸ್ವಂತ ಮನೆಯಲ್ಲೇ ಸಮಿತಿಯ ಒಂದು ಶಾಖೆಯನ್ನೂ ಸ್ಥಾಪಿಸಿದರು. ತಮ್ಮ ಕಾರ್ಯವ್ಯಾಪ್ತಿಯ ಕ್ಷೇತ್ರದಲ್ಲಿ ಇತರ ಐದು ಶಾಖೆಗಳನ್ನು ತೆರೆದು ಕ್ರಾಂತಿ ಕಾರ್ಯಕ್ಕೆ ಬಲ ತುಂಬಿದ. ಈ ಶಾಖೆಗಳಲ್ಲಿ ದೈಹಿಕ ವ್ಯಾಯಾಮದ ಜೊತೆಗೆ ಮತ್ತು ಆತ್ಮರಕ್ಷಣೆಯ ಶಿಕ್ಷಣ ನೀಡಲಾಗುತ್ತಿತ್ತು.

ಕನ್ನಾಯಿಯ ಬಾಹ್ಯ ರೂಪದಿಂದ ಅವನ ಮನದಾಳದಲ್ಲಿದ್ದ ವಿಪ್ಲವದ ತುಡಿತವನ್ನು ಗ್ರಹಿಸುವುದು ಅಸಾಧ್ಯವಾಗಿತ್ತು. ಆತ ನಡೆಸುತ್ತಿದ್ದ ಅನುಶೀಲನ ಸಮಿತಿಯ ಶಾಖೆಗಳಾದರೂ ಅಷ್ಟೇ. ಹೊರಗಿನಿಂದ ಕ್ರಾಂತಿ ಸಮಿತಿಯೊಂದರ ಶಾಖೆಗಳೆಂದೂ ಯಾರಿಗೂ ತಿಳಿಯುತ್ತಿರಲಿಲ್ಲ. ಆದರೆ ಅಲ್ಲಿ ಬರುತ್ತಿದ್ದವರು ಮತ್ತು ತಯಾರಾಗುತ್ತಿದ್ದವರು ಮಾತ್ರ ಮಾತೃಭೂಮಿಗಾಗಿ ಜೀವತೇಯಲು ಸಿದ್ಧರಾಗುತ್ತಿದ್ದ ಅಪ್ಪಟ ಕ್ರಾಂತಿಕಾರಿಗಳೇ. ಇಂತಹ ಶಾಂತ ಸೌಮ್ಯರೂಪದ ತರುಣ ಕನ್ನಾಯಿ ಅಮಾವಾಸ್ಯೆಯ ಕಾಳರಾತ್ರಿಯಲ್ಲೊಮ್ಮೆ ವಿಶಾಲ ವಟವೃಕ್ಷದಡಿಯಲ್ಲಿ ತನ್ನ ಜೀವನವನ್ನು ತಾಯಿ ಭಾರತಿಯ ದಾಸ್ಯದ ಪಾಶಕಳೆಯುವ ಕಡುತರ ಕ್ರಾಂತಿವ್ರತಕ್ಕೆ ಮುಡುಪಾಗಿಡುವ ಅತ್ಯಂತ ಕಠಿಣ ದೀಕ್ಷೆತೊಟ್ಟ.

ಖುದಿರಾಮ್ ಬೋಸ್ ನಡೆಸಿದ ಮುಜಫರ್‌ಪುರ್ ಬಾಂಬ್ ಸ್ಫೋಟದ ನಂತರ, ಬ್ರಿಟಿಷ್ ರಾಜ್ಯದ ನೆಮ್ಮದಿಯೇ ನಾಶವಾಗಿ ಹೋಗಿತ್ತು. ಸಂಪೂರ್ಣ ಬ್ರಿಟಿಷ್ ಆಡಳಿತವೇ ಜಾಗರೂಕತೆಯಿಂದ ಮೈಯೆಲ್ಲ ಕಣ್ಣಾಗಿಸಿಕೊಂಡು ಅನುಮಾನಾಸ್ಪದ ವ್ಯಕ್ತಿಗಳ ಹುಡುಕಾಟವನ್ನು ಪ್ರಾರಂಭಿಸಿತು. ಅನೇಕ ದಿನಗಳ ಪ್ರಯತ್ನಗಳ ನಂತರ ಈ ಕ್ರಾಂತಿಕಾರಿಗಳ ನೆಲೆ ಮಣಿಕತಲ್ಲಾದ ಕೈತೋಟವೊಂದರಲ್ಲಿದೆ ಎಂದು ಪೊಲೀಸರಿಗೆ ತಿಳಿಯಿತು. ಈ ಉದ್ಯಾನ ಅರವಿಂದ ಘೋಷರ ಸಹೋದರ ಸಿವಿಲ್ ಸರ್ಜನ್ ಡಾ. ಬಾರೀಂದ್ರ ಘೋಷ್‌ರಿಗೆ ಸೇರಿತ್ತು. ಗುಪ್ತಚರ ಇಲಾಖೆ ಕ್ರಾಂತಿಕಾರಿಗಳ ಚಟುವಟಿಕೆಗಳ ಮೇಲೆ ಹದ್ದಿನ ಕಣ್ಣಿಡಲು ಪ್ರಾರಂಭಿಸಿತು. ಹೆಚ್ಚಿನ ಸಮಯ ಗೂಢಚಾರಿಕೆ ಮಾಡುವವರು ಸ್ಥಳೀಯರೇ ಆಗಿರುತ್ತಿದ್ದರು.

ದುರದೃಷ್ಟವಶಾತ್, ಕ್ರಾಂತಿಕಾರಿಗಳಿಗೆ ಈ ಚಟುವಟಿಕೆಗಳ ಸಂಪೂರ್ಣ ಅರಿವಿರಲಿಲ್ಲ. ಪರಿಣಾಮವಶಾತ್, ಬ್ರಿಟಿಷ್ ಸರ್ಕಾರದ ವಿರುದ್ಧದ ದೇಶದ ಮೊದಲ ಬಾಂಬ್ ಪಿತೂರಿ ಬಹಿರಂಗವಾಯಿತು.

ಇದರಲ್ಲಿ ಉದ್ಯಾನದ ಮಾಲೀಕ ಬಾರೀಂದ್ರ ಘೋಷ್, ಅವರ ಸಹೋದರ ಅರವಿಂದ ಘೋಷ್, ನಳಿನಿ ಕನ್ನಾಯಿ ಲಾಲ್ ದತ್ ಸೇರಿದಂತೆ ಸುಮಾರು 35 ದೇಶಭಕ್ತರು ಪೊಲೀಸರ ಕೈಗೆ ಸಿಲುಕಿದರು.

ಈ ಎಲ್ಲ ಕ್ರಾಂತಿಕಾರಿಗಳನ್ನು ಅಲಿಪುರ ಜೈಲಿನಲ್ಲಿರಿಸಿ ವಿಚಾರಣೆಗೆ ಒಳಪಡಿಸಲಾಯಿತು. ಈ ಪ್ರಕರಣಕ್ಕೆ 'ಅಲಿಪೋರ್ ಪಿತೂರಿ' ಎಂದು ಹೆಸರಿಸಲಾಯಿತು. ಕನ್ನಾಯಿ ಲಾಲ್ ದತ್ ಜೊತೆಗೆ ಅವರ ಪ್ರೇರಕ ಪ್ರಾಧ್ಯಾಪಕ ಚಾರು ಚಂದ್ರ ರೈ ಅವರೂ ಬಂಧನಕ್ಕೊಳಗಾದರು. ಎಲ್ಲರ ವಿರುದ್ಧ ಕಾನೂನು ಕ್ರಮ ಜರುಗಿಸಲಾಯಿತು. ಇದೆಲ್ಲದರ ನಡುವೆ ಈ ಕ್ರಾಂತಿಕಾರಿಗಳ ಸಹಕಾರಿಯಾಗಿದ್ದ ನರೇಂದ್ರ ಗೋಸ್ವಾಮಿ ಎಂಬುವನೊಬ್ಬ ಬ್ರಿಟಿಷ್ ಪೋಲೀಸರ ಸಾಕ್ಷಿಯಾಗಲು ಒಪ್ಪಿಕೊಂಡ. ಇದರಿಂದಾಗಿ ಕ್ರಾಂತಿಯ ಇತರೆ ಸದಸ್ಯರುಗಳ ಮತ್ತು ಅವರ ಗುಪ್ತ ಪ್ರಯತ್ನಗಳ ಎಲ್ಲ ಮಾಹಿತಿಗಳೂ ಬಯಲಾಗುವ ಶಂಕೆ ಶುರುವಾಯಿತು.ಇದನ್ನು ತಪ್ಪಿಸಲೆಂದೇ ಕನ್ನಾಯಿ ಮತ್ತು ಸತ್ಯೇಂದ್ರ ಬಸು ಜೈಲಿನಲ್ಲೇ ನರೇಂದ್ರನನ್ನು ಮುಗಿಸಿಬಿಡುವ ಯೋಜನೆ ತಯಾರಿಸಿದರು. ಜೈಲು ಅಧಿಕಾರಿಗಳೊಡನೆ ಮಿತ್ರತೆ ಸಾಧಿಸಿ ಪಿಸ್ತೂಲೊಂದನ್ನು ಸಂಪಾದಿಸಿದರು.

ನರೇಂದ್ರನ ವಿಚಾರಣೆಯ ದಿನಾಂಕ ಹತ್ತಿರವಾಗತೊಡಗಿತು. ಆತ ತನ್ನ ಕ್ರಾಂತಿಕಾರಿ ಮಿತ್ರರ ವಿರುದ್ಧ ಹೇಳಿಕೆಯನ್ನು ನೀಡಲು ನಿರ್ಧರಿಸಿದ್ದ. ಪ್ರತಿದಿನದ ತನ್ನ ಸತ್ಯೇಂದ್ರ ಮತ್ತು ಕನ್ನಾಯಿ ಲಾಲ್ ಅವರನ್ನು ಭೇಟಿಯಾಗಲು ನಿಯಮಿತವಾಗಿ ಬರುತ್ತಿದ್ದ.

1909ರ ಆಗಸ್ಟ್ 31 ರಂದು ತನ್ನ ಎಂದಿನ ಸಮಯಕ್ಕೆ ಬಂದ. ಸತ್ಯೇಂದ್ರ ನರೇಂದ್ರನ ತಲೆಗೆ ಗುರಿಯಿಟ್ಟು ಇಟ್ಟು ಗುಂಡು ಹಾರಿಸಿ ದೇಶದ್ರೋಹಕ್ಕೆ ತಕ್ಕ ಪ್ರತಿಫಲ ನೀಡುವ ತನ್ನ ಯೋಜನೆಗೆ ಮುಂದಾದ, ಆದರೆ ಸತ್ಯೆಂದ್ರನನ್ನು ಕೆಡವಿದ ನರೇಂದ್ರ ತಪ್ಪಿಸಿಕೊಂಡು ಓಡಲು ಪ್ರಾರಂಭಿಸಿದಾಗ ಸತ್ಯೇಂದ್ರ ಮತ್ತು ಕನ್ನಾಯಿ ಇಬ್ಬರೂ ದೇಶದ್ರೋಹಿಯನ್ನು ಅಲ್ಲೇ ಹಿಡಿದುಹಾಕಿ ಅವನ ಮೇಲೆ ಗುಂಡಿನ ಮಳೆಗರೆದರು.

ಕನ್ನಾಯಿ ಮತ್ತು ಸತ್ಯೇನ್ ವಿರುದ್ಧ ಬ್ರಿಟಿಷ್ ನ್ಯಾಯಾಲಯ ಅಕ್ಟೊಬರ್ 21, 1908ರಂದು ಮರಣ ದಂಡನೆಯ ಶಿಕ್ಷೆಯನ್ನು ಘೋಷಿಸಿತು. ಇಡೀ ವಿಚಾರಣೆಯ ಉದ್ದಕ್ಕೂ ಕನ್ನಾಯಿ ಸ್ಥಿತಪ್ರಜ್ಞನಾಗಿದ್ದ. ಬದಲಾಗಿ ನ್ಯಾಯಾಧೀಶ ಕೊಲೆಯ ಹಿಂದಿನ ಉದ್ದೇಶವನ್ನು ಕೇಳಿದಾಗ ಅದಕ್ಕೆ ಉತ್ತರಿಸುತ್ತಾ ಕನ್ನಾಯಿ, ಆತನೊಬ್ಬ ದೇಶದ್ರೋಹಿ ಆತನ ಪಾಪಕ್ಕೆ ತಕ್ಕ ಶಿಕ್ಷೆ ಆಗಿದೆ ಎಂದು ಉತ್ತರಿಸಿದ.

ನ್ಯಾಯಾಲಯದ ತೀರ್ಪಿನ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಲು ಸಹ ನಿರಾಕರಿಸಿ ತನ್ನ ಬದ್ಧತೆಯ ಪುರಾವೆ ಕೊಟ್ಟ.

ಕನ್ನಾಯಿಗೆ ಆತನ ದೇಶಪ್ರೇಮದ ಪಾರಿತೋಷಕವಾಗಿ ನವೆಂಬರ್ 10, 1909ರಂದು ಗಲ್ಲಿಗೇರಿದಾಗ ಆತನ ವಯಸ್ಸು ಮಾತ್ರ 20 ವರ್ಷ.

ಕನ್ನಾಯಿ ಲಾಲ್ ದತ್ ಒಬ್ಬ ಆದರ್ಶ ಕ್ರಾಂತಿಕಾರಿ. ಸ್ವಾತಂತ್ರ್ಯ ಚಳುವಳಿಗೆ ತಾನು ಸ್ವತಃ ಸೇರಿದ್ದಲ್ಲದೇ ತನ್ನಂತೆ ತಾಯಿ ಭಾರತೀಯ ಸೇವೆ ಮಾಡಲು ಇತರ ಯುವಕರಿಗೂ ಹುರಿದುಂಬಿಸಿದವರು. ದೇಶಕ್ಕಾಗಿ ಸಂತೋಷದಿಂದ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದವರು.


ಫೆಬ್ರುವರಿ 22, 2021ರಂದು ಪ್ರಧಾನಿ ನರೇಂದ್ರ ಮೋದಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ ಬಂಗಾಳದ ಸೇನಾನಿಗಳ ಸಂದರ್ಭದಲ್ಲಿ ಕನ್ನಯ್ಯನನ್ನೂ ಸ್ಮರಿಸಿದರು. ■

## ಎಲ್ಲೋ ಕೇಳಿದ ಕಥೆ

ಸ್ವಾಮಿ ರಾಮಕೃಷ್ಣ ಪರಮಹಂಸರು ತಮ್ಮ ಆಧ್ಯಾತ್ಮಿಕ ಸಾಧನೆಯ ಮೂಲಕ ಇಡೀ ವಿಶ್ವದ ಗಮನವನ್ನು ಸೆಳೆದಿದ್ದರು. ಆದರೆ ಕೆಲವರಿಗೆ ಈ ಕುರಿತು ಮತ್ಸರ ಉಂಟಾಗಿತ್ತು. ಅಂತಹ ಮತ್ಸರಿಗಳಲ್ಲಿ ಒಬ್ಬ ಅವರ ಶಿಷ್ಯತ್ವ ಕೋರಿ ಬಂದ ಸಾಧುವೂ ಒಬ್ಬನಿದ್ದ. ಆತನು ಪರಮಹಂಸರ ಬಳಿ ಬಂದು ಹೇಳಿದ– "ಮಹಾಶಯರೇ, ನೀವು ನನ್ನ ಮುಂದೆ ಒಂದು ಚಮತ್ಕಾರ ಮಾಡಿ ತೋರಿಸಿದರೆ ನಾನು ನಿಮ್ಮನ್ನು ಶ್ರೇಷ್ಠ ಪರಮಹಂಸರೆಂದು ಒಪ್ಪುತ್ತೇನೆ. ಹನುಮಂತನು ಒಂದೇ ಜಿಗಿತದಲ್ಲಿ ಸಮುದ್ರ ದಾಟಿದ್ದ. ನೀವು ಅಂತಹುದೇ ಚಮತ್ಕಾರ ಮಾಡಿ ತೋರಿಸಿರಿ. ನೀರಿನ ಮೇಲೆ ನಡೆಯಿರಿ".

ಮುಗುಳುನಗುತ್ತಾ ಪರಮಹಂಸರು ನುಡಿದರು– "ನಿನಗೆ ತಪ್ಪು ಕಲ್ಪನೆ ಉಂಟಾಗಿದೆ. ನಾನು ಅಂತಹ ಚಮತ್ಕಾರ ಮಾಡಲಾರೆನು. ನೀರಿನ ಮೇಲೆ ನಡೆಯಲು ಸಾಧ್ಯವಿಲ್ಲ". ಆಗ ಸಾಧು ಸಿಟ್ಟಾಗಿ ಗರ್ಜಿಸಿದ– "ನಿಮ್ಮಲ್ಲಿ ಅಂತಹ ಚಮತ್ಕಾರಿಕ ಶಕ್ತಿ ಇದೆ ಎಂದು ನಂಬಿ ಕಳೆದ ಹದಿನೆಂಟು ವರ್ಷಗಳಿಂದ ನಿಮ್ಮ ಸೇವೆ ಮಾಡಿದ್ದು ವ್ಯರ್ಥವಾಯಿತು. ಆದರೂ ನಾನು ನದಿಯ ನೀರಿನ ಮೇಲೆ ನಡೆದು ದಾಟಬಲ್ಲೆ".

ಇದನ್ನು ಕೇಳಿ ಮುಗುಳುನಗುತ್ತಾ ಪರಮಹಂಸರು ನುಡಿದರು– "ಇದೆಂತಹ ಚಮತ್ಕಾರ? ದೋಣಿ ನಡೆಸುವ ನಾವಿಕನಿಗೆ ಎರಡು ರೂ. ನೀಡಿದರೆ ಆತ ಸಲೀಸಾಗಿ ನದಿ ದಾಟಿಸಬಲ್ಲ. ನಿನ್ನ ಅದ್ಭುತ ಚಮತ್ಕಾರದ ಬೆಲೆ ಕೇವಲ ಎರಡು ರೂಪಾಯಿ! ಇಂತಹ ಚಮತ್ಕಾರ– ಸಿದ್ಧಿಗಳ ಬಗ್ಗೆ ಅಹಂಕಾರ ಬೇಡ. ಭಗವಂತನನ್ನು ಒಲಿಸುವ ಭಕ್ತಿ–ಆರಾಧನೆ ಮುಖ್ಯ," ಎಂದರು. ಇದನ್ನು ಕೇಳಿ ಸಾಧುವಿಗೆ ಸಿಡಿಲು ಬಡಿದಂತಾಯಿತು. ಹದಿನೆಂಟು ವರ್ಷಗಳ ಕಾಲ ಆತ ಸಾಧನೆ ಮಾಡಿ ಪಡೆದ ಸಿದ್ಧಿಯ ಮೌಲ್ಯ ಕೇವಲ ಎರಡು ರೂಪಾಯಿ ಎಂದು ಅರ್ಥವಾದಾಗ ಆತನಿಗೆ ತಲೆ ತಗ್ಗಿಸುವಂತಾಯಿತು. ಯೋಗಿಯು ತಲೆ ಬಾಗಿ "ನಿಜ ಮಹಾಶಯರೇ, ನನ್ನನ್ನು ಮನ್ನಿಸಿರಿ," ಎಂದು ನಮಸ್ಕರಿಸಿ ಹೊರಟು ಹೋದ. ಪ್ರಪಂಚವನ್ನು ಚಮತ್ಕಾರ, ಜಾದೂ, ಮಂತ್ರಗಳಿಂದ ಗೆಲ್ಲಲು ಸಾಧ್ಯವಿಲ್ಲ. ಪರಿಶುದ್ಧ ಅಂತಃಕರಣದಿಂದ ಮಾಡುವ ಧ್ಯಾನ, ಭಕ್ತಿ, ಸಾಧನೆಗಳಿಂದಲೇ ನಾವು ಆತ್ಮೋದ್ಧಾರದ ಕಡೆಗೆ ಸಾಗುತ್ತೇವೆ.




## ಟಿಪ್ಪುವಿನ ನಿಜ ಕನಸುಗಳು

ಪುಸ್ತಕ ಪರಿಚಯ

ಪ್ರಕಾಶಕರು: ಅಯೋಧ್ಯಾ ಪ್ರಕಾಶನ
ಲೇಖಕರು: ಅದ್ದಂಡ ಕಾರ್ಯಪ್ಪ

ಟಿಪ್ಪು ನಿಜಕನಸುಗಳು ಕೃತಿಯಲ್ಲಿ ಇತಿಹಾಸದ ಹಲವು ಘಟನೆಗಳನ್ನು ಅತ್ಯಂತ ಶಕ್ತಿಶಾಲಿ ಸಂಭಾಷಣೆಗಳಲ್ಲಿ, ದೃಶ್ಯಗಳಲ್ಲಿ ಕಟ್ಟಿಕೊಡುವ ಪ್ರಯತ್ನ ಮಾಡಲಾಗಿದೆ. ಟಿಪ್ಪುವಿನ ವ್ಯಕ್ತಿತ್ವದೊಳಗೆ ಸೂಕ್ಷ್ಮ ದರ್ಶಕವಿಟ್ಟು ನೋಡಿರುವಂತೆ ಆತನ ಬದುಕಿನ ಕತೆಯನ್ನು ಅತ್ಯಂತ ವಿಭಿನ್ನ ಶೈಲಿಯಲ್ಲಿ ಇಲ್ಲಿ ಹೇಳಲಾಗಿದೆ. ಕೃತಿಗೆ ಭಾರತದ ಮಹತ್ವದ ಸಾಹಿತಿಗಳಾದ ಡಾ. ಎಸ್.ಎಲ್. ಭೈರಪ್ಪ ಅವರ ಮುನ್ನುಡಿಯಿದೆ. ಕರ್ನಾಟಕದ ಪ್ರಖರ ಚಿಂತಕರೂ ವಾಗ್ಮಿಗಳೂ ಆಗಿರುವ ಚಕ್ರವರ್ತಿ ಸೂಲಿಬೆಲೆ ಬೆನ್ನುಡಿ ಬರೆದಿದ್ದಾರೆ. ನಾಟಕರಂಗದಲ್ಲಿ ಹಲವು ವರ್ಷಗಳಿಂದ ನಿರಂತರವಾಗಿ ತೊಡಗಿಸಿಕೊಂಡಿರುವ ಮತ್ತು ಮೈಸೂರು ರಂಗಾಯಣ ನಿರ್ದೇಶಕರಾದ ಅಡ್ಡಂಡ ಸಿ. ಕಾರ್ಯಪ್ಪ ಒಂದು ಅನನ್ಯ ಸಾಹಿತ್ಯಿಕ ಕೃತಿಯನ್ನು ಕನ್ನಡಕ್ಕೆ ಕೊಟ್ಟಿರುವುದರಲ್ಲಿ ಎರಡು ಮಾತಿಲ್ಲ.

**www.ayodhyabooks.com Ph: 9620916996**

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ

# ಕನ್ನಡ ಶಾಲಾ ಮಕ್ಕಳ ಹಬ್ಬ ವಿಶೇಷ ಆಕರ್ಷಣೆಗಳ ಕನ್ನಡದ ಸಂಭ್ರಮ

ಸಾವಿರಾರು ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಭಾಗವಹಿಸಿದರು. ಮೆರವಣಿಗೆಯಲ್ಲಿ ಸಾಂಕೇತಿಕವಾಗಿ ಕೆಲವು ಪುಸ್ತಕಗಳನ್ನು ಪಲ್ಲಕ್ಕಿಯಲ್ಲಿ ಹೊತ್ತು ತರವ ಮೂಲಕ ಕನ್ನಡದ ಕೆಲಸಕ್ಕೆ ಹೆಗಲು ಕೊಡಬೇಕಾದದ್ದು ಪ್ರತಿಯೊಬ್ಬರ ಜವಾಬ್ದಾರಿಯೆಂದು ಜಾಗೃತಿ ಮೂಡಿಸಲಾಯಿತು. ಇದೇ ಸಂದರ್ಭದಲ್ಲಿ ಶಾಲಾ ಮಕ್ಕಳಲ್ಲಿ ಕನ್ನಡ ನಾಡು, ನುಡಿ, ಸಾಧಕರ ಕುರಿತಾದ ಅಪೂರ್ವ ಮಾಹಿತಿಯುಳ್ಳ ಮತ್ತು ಸಾಮಾನ್ಯ ಜ್ಞಾನವನ್ನು ವೃದ್ಧಿಸುವ ಪ್ರದರ್ಶಿನಿಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ ಅವರು ಕನ್ನಡ ಭುವನೇಶ್ವರಿಗೆ ಪುಷ್ಪಾರ್ಚನೆ ಮಾಡುವ ಮೂಲಕ  ಉದ್ಘಾಟಿಸಿದರು. ಮೊದಲ ದಿನದ ಕನ್ನಡ ಶಾಲಾ ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ರವೀಂದ್ರ ಪ್ರಭು ಮತ್ತು ತಂಡದಿಂದ ರಸಮಂಜರಿ ಕಾರ್ಯಕ್ರಮ, ಅಂತರಾಷ್ಟ್ರೀಯ ಖ್ಯಾತಿಯ ಕುದ್ರೋಳಿ ಗಣೇಶ್ ಹಾಗೂ ಬಳಗದವರ ವತಿಯಿಂದ ಜಾದೂ ಕಾರ್ಯಕ್ರಮ, ಆಳ್ವಾಸ್ ಸಮೂಹ ಸಂಸ್ಥೆಗಳ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ, ಮಲ್ಲಕಂಬ, ತುಳು ಲಿಪಿ ಪರಿಚಯ, ಉದ್ಯೋಗಾವಕಾಶ ಮಾರ್ಗದರ್ಶಿ, ವಿಜ್ಞಾನ ಮಾದರಿಗಳ ಪ್ರದರ್ಶನ, ಆಟದ ಬಯಲು, ಮಂಗಳೂರಿನ ಶಾರದಾ ವಿದ್ಯಾಲಯ ಹಾಗೂ ಪೊಳಲಿ ಟೈಗರ್ಸ್ ಹುಲಿ ಕುಣಿತ ಪ್ರದರ್ಶನ, ಗೊಂಬೆ ವೇಷಧಾರಿಗಳ ಮೂಲಕ ಮಕ್ಕಳನ್ನು ಮನೋರಂಜಿಸಿದವು. ಕಾರ್ಯಕ್ರಮದಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಒಟ್ಟು ಎಂಟು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಭಾಗವಹಿಸಿದ್ದರು.




**ಗೋಷ್ಠಿ – 1 :** ಕೇಶವ ಸ್ಮೃತಿ ಸಂವರ್ಧನ ಸಮಿತಿ (ನೋಂ.) ಮಂಗಳೂರಿನ ಸಂಘನಿಕೇತನದಲ್ಲಿ ಆಯೋಜಿಸಿದ ಎರಡು ದಿನಗಳ ಕನ್ನಡ ಶಾಲಾ ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ಮೊದಲ ದಿನದ ಮೊದಲ ಸಂವಾದ ಗೋಷ್ಠಿ ಶಿವರಾಮ ಕಾರಂತ ವೇದಿಕೆಯಲ್ಲಿ ಜರುಗಿತು. ಸಂವಾದ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಬಿ.ಸಿ.ನಾಗೇಶ್ ರಾಷ್ಟ್ರೀಯ ಶಿಕ್ಷಣ ನೀತಿ ಎಂಬ ವಿಷಯದ ಕುರಿತು ಶಿಕ್ಷಕರೊಂದಿಗೆ ಸಂವಾದ ನಡೆಸಿದರು. ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೊಳ್ಳುವ ಪೂರ್ವದ ತಯಾರಿ, ನಂತರದ ಅನುಷ್ಠಾನ ಮತ್ತು ಅದರ ಧ್ಯೇಯದ ಸಾಧನೆಗಾಗಿ ಶಿಕ್ಷಕರ ಪಾತ್ರವೇನು ಎನ್ನುವುದನ್ನು ಚರ್ಚಿಸಲಾಯಿತು. ಶಿಕ್ಷಣದ ಕೊರತೆ ಮತ್ತು ಬದಲಾಗಬೇಕಾದ ಅನಿವಾರ್ಯತೆಯ ಕುರಿತು ತಿಳಿಸಿದರು. ವೇದಿಕೆಯಲ್ಲಿ ಕ್ಯಾಪ್ಟನ್ ಗಣೇಶ್ ಕಾರ್ಣಿಕ್ ಉಪಸ್ಥಿತರಿದ್ದರು.

**ಗೋಷ್ಠಿ – 2:** ಕೇಶವ ಸ್ಮೃತಿ ಸಂವರ್ಧನ ಸಮಿತಿ (ನೋಂ.) ಮಂಗಳೂರಿನ ಸಂಘನಿಕೇತನದಲ್ಲಿ ಆಯೋಜಿಸಿದ ಎರಡು ದಿನಗಳ ಕನ್ನಡ ಶಾಲಾ ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ಮೊದಲ ದಿನದ ದ್ವಿತೀಯ ಸಂವಾದ ಗೋಷ್ಠಿ ಶಿವರಾಮ ಕಾರಂತ ವೇದಿಕೆಯಲ್ಲಿ ಜರುಗಿತು. ಈ ಸಂವಾದ ಕಾರ್ಯಕ್ರಮದಲ್ಲಿ ಐಎಎಸ್ ಅಧಿಕಾರಿ ನಂದಿನಿ ಕೆ.ಆರ್ ಕನ್ನಡ ಮಾಧ್ಯಮ ಶಾಲಾ ಮಕ್ಕಳೊಂದಿಗೆ ಸಂವಾದ ನಡೆಸಿದರು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ, ಒತ್ತಡ ನಿರ್ವಹಣೆ, ಸಮಯ ನಿರ್ವಹಣೆ, ತಾಳ್ಮೆಯ ಮಹತ್ವ, ನಿರಂತರ ಪ್ರಯತ್ನದ ಕುರಿತಾದ ಮಕ್ಕಳ ಹಲವು ಪ್ರಶ್ನೆಗಳಿಗೆ ಉತ್ತರವನ್ನು ನೀಡಿದರು.

**ಗೋಷ್ಠಿ – 3 :** ಕೇಶವ ಸ್ಮೃತಿ ಸಂವರ್ಧನ ಸಮಿತಿ (ನೋಂ.) ಮಂಗಳೂರಿನ ಸಂಘನಿಕೇತನದಲ್ಲಿ ಆಯೋಜಿಸಿದ ಎರಡು ದಿನಗಳ ಕನ್ನಡ ಶಾಲಾ ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ಮೊದಲ ದಿನದ ತೃತೀಯ ಗೋಷ್ಠಿ ಶಿವರಾಮ ಕಾರಂತ ವೇದಿಕೆಯಲ್ಲಿ ನಡೆಯಿತು. ಗೋಷ್ಠಿಯಲ್ಲಿ ಖ್ಯಾತ ಅಂಕಣಕಾರ ಮತ್ತು ಕರ್ನಾಟಕ ಸರಕಾರದ ಪಠ್ಯಪುಸ್ತಕ ಪುನರ್‌ರಚನಾ ಸಮಿತಿಯ ಮಾಜಿ ಅಧ್ಯಕ್ಷ ರೋಹಿತ್ ಚಕ್ರತೀರ್ಥ ಪೋಷಕರೊಂದಿಗೆ ಸಂವಾದ ನಡೆಸಿದರು. ಸಂವಾದದಲ್ಲಿ ಪೋಷಕರಿಗೆ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ಗೊಂದಲಗಳನ್ನು ನಿವಾರಿಸಿದರು. ವೇದಿಕೆಯಲ್ಲಿ ಪ್ರದೀಪ್ ಕುಮಾರ್ ಕಲ್ಕೂರ ಉಪಸ್ಥಿತರಿದ್ದರು.

**ಗೋಷ್ಠಿ – 4 :** ಕೇಶವ ಸ್ಮೃತಿ ಸಂವರ್ಧನ ಸಮಿತಿ (ನೋಂ.) ಮಂಗಳೂರಿನ ಸಂಘನಿಕೇತನದಲ್ಲಿ ಆಯೋಜಿಸಿದ ಎರಡು ದಿನಗಳ ಕನ್ನಡ ಶಾಲಾ ಮಕ್ಕಳ ಹಬ್ಬ ಕಾರ್ಯಕ್ರಮದಲ್ಲಿ ಮೊದಲ ದಿನದ ನಾಲ್ಕನೇ ಗೋಷ್ಠಿ ಶಿವರಾಮ ಕಾರಂತ ವೇದಿಕೆಯಲ್ಲಿ ನಡೆಯಿತು. ಗೋಷ್ಠಿಯಲ್ಲಿ ಬೆಂಗಳೂರಿನ ಉಪನ್ಯಾಸಕ ರಾಜೇಶ್ ಪದ್ಮಾರ್ ಕನ್ನಡ ಮತ್ತು ರಾಷ್ಟ್ರೀಯತೆ ಕುರಿತಾಗಿ ವಿಚಾರ ಮಂಡಿಸಿದರು. ಹಾಗೆಯೇ ಕನ್ನಡ ಮತ್ತು ರಾಷ್ಟ್ರೀಯತೆಯ ಕುರಿತಾಗಿ ಉಪಸ್ಥಿತರಿದ್ದವರೊಂದಿಗೆ ಸಂವಾದ ನಡೆಸಲಾಯಿತು. ವೇದಿಕೆಯಲ್ಲಿ ಸಹಾಯಕ ಪ್ರಾಧ್ಯಾಪಕ ಡಾ.ಮಾಧವ ಎಂ.ಕೆ. ಉಪಸ್ಥಿತರಿದ್ದರು.

# ಹಿರಿಯ ಲೇಖಕ ಎಸ್.ಆರ್. ರಾಮಸ್ವಾಮಿ ಅವರಿಗೆ ಅಭಿನಂದನೆ, 'ದೀಪಸಾಕ್ಷಿ' ಗ್ರಂಥ ಬಿಡುಗಡೆ



ಬೆಂಗಳೂರಿನ ಬಸವನಗುಡಿಯ ಗೋಖಲೆ ವಿಚಾರ ಸಂಸ್ಥೆಯ ಡಿವಿಜಿ ಸಭಾಂಗಣದಲ್ಲಿ ನಾಡೋಜ ಎಸ್.ಆರ್. ರಾಮಸ್ವಾಮಿಯವರ ಅಭಿನಂದನಾ ಗ್ರಂಥ ದೀಪಸಾಕ್ಷಿ ಪುಸ್ತಕದ ಬಿಡುಗಡೆ ಕಾರ್ಯಕ್ರಮ ಜರುಗಿತು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹಸರಕಾರ್ಯವಾಹರಾದ ಶ್ರೀ ಮುಕುಂದ ಅವರು ಮಾತನಾಡುತ್ತಾ, "ಸಾಮಾನ್ಯರ ಜೊತೆಗೆ ವಿದ್ವಾಂಸರೆಂಬ ಹಮ್ಮಿಲ್ಲದೆ ಬೆರೆಯುತ್ತಿದ್ದ ರಾಮಸ್ವಾಮಿ ಅವರು, ಸಂಘಟನೆಗಳ ವಾತಾವರಣಗಳಲ್ಲಿ ಅತ್ಯಂತ ಕ್ರಿಯಾಶೀಲವಾಗಿ ಮಾರ್ಗದರ್ಶನ ಮಾಡುತ್ತಿದ್ದರು. ಅವರಿಂದ ಪ್ರೇರಿತರಾಗಿ ಅನೇಕರು ಬರವಣಿಗೆಗೆ ತೊಡಗಿಸಿಕೊಂಡಿದ್ದವರಿದ್ದಾರೆ. ಅವರು ಗಡಿಬಿಡಿಯ ವಾತಾವರಣದ ನಡುವೆಯೂ ಪ್ರೇರಣೆಯನ್ನು ಸತತವಾಗಿ ನೀಡುತ್ತಿದ್ದರು. ಅವರೊಬ್ಬ ಸಾಮಾಜಿಕ ಕೋಗಿಲೆ, ಹೇಗೆ ಕೋಗಿಲೆ ಎಂತಹ ಕಾಗೆಗಳ ಮಧ್ಯೆಯಿದ್ದರೂ ಸ್ವಂತ ಸ್ವತ್ವ ಬಿಡುವುದಿಲ್ಲವೋ ಹಾಗೆ ರಾಮಸ್ವಾಮಿಯವರು, ನಮ್ಮಂಥವರ ನಡುವೆ ಗೌಜು ಗದ್ದಲದಲ್ಲಿದ್ದರೂ ಚಿಂತನೆ ನಡೆಸಿದವರು. ವೈಚಾರಿಕ ಮತ್ತು ರಾಷ್ಟ್ರೀಯ ಆಂದೋಲನದ ಪ್ರಯತ್ನಗಳ ಹಿನ್ನೆಲೆಯಲ್ಲಿ ರಾಮಸ್ವಾಮಿಯವರು ಮಾಡಿದ ಲೇಖನ ಕಾರ್ಯ ಈ ಸ್ಥಿತ್ಯಂತರ ಕಾಲದಲ್ಲಿ ನಮಗೆಲ್ಲರಿಗೂ ಅತ್ಯಂತ ಅಗತ್ಯವಾದ ಸಾಮಗ್ರಿ. ಧರ್ಮಪಾಲ್ ಅವರ ಭಾರತೀಯ ಚಿತ್ತ, ಮಾನಸಿಕತೆ ಮತ್ತು ಕಾಲ ಪುಸ್ತಕಕ್ಕೆ ಬರೆದ ಉಪೋದ್ಘಾತವು ಇವತ್ತಿನ ಸಾಮಾಜಿಕ ಬದಲಾವಣೆಗಳಿಗೆ ಮಾನ್ಯತೆ ಸಿಗುತ್ತಿರುವ ಇಂದಿಗೆ ಅತ್ಯಂತ ಪ್ರಸ್ತುತ. ವಸಾಹತುಶಾಹಿ ಮನಸ್ಥಿಯಿಂದ ಹೊರಬರುತ್ತಿರುವ ಈ ಕಾಲಘಟ್ಟದಲ್ಲಿ ಅವರು ನೀಡಿದ ದೃಷ್ಟಿ ಪ್ರೇರಣಾದಾಯಿ" ಎಂದರು.

ಅಧ್ಯಕ್ಷತೆ ವಹಿಸಿದ್ದ ಡಾ. ಎಸ್.ಎಲ್. ಭೈರಪ್ಪನವರು ಮಾತನಾಡಿ, "ದೀಪ ಸಾಕ್ಷಿ ಪ್ರಕಟವಾಗುವುದಕ್ಕೆ ಮೊದಲೇ ಓದಿದ್ದೇನೆ, ಇದರಲ್ಲಿ ನನಗೆ ಬಹಳ ಮನಸ್ಸಿಗೆ ತಟ್ಟಿದ ವಿಷಯ ಏನೆಂದರೆ ಯಾದವರಾವ್ ಜೋಷಿಯವರು ಕರ್ನಾಟಕಕ್ಕೆ ಬಂದು, ಆರ್‌ಎಸ್‌ಎಸ್ ಅನ್ನು ಬೆಳೆಸುವುದಕ್ಕಾಗಿ ಕೇಶವ್ ಅವರನ್ನು ಕಳುಹಿಸಿದರು. ಅವರಿಗೆ ಸಂಗೀತವೂ ಗೊತ್ತಿತ್ತು. ಅವರಿಗೆ ಒಮ್ಮೆ ಕರ್ನಾಟಕದಲ್ಲಿ ವೇದ ಪಠಣವನ್ನು ಹೇಗೆ ಮಾಡುತ್ತಾರೆ ಎಂದು ಕೇಳುವ ಆಸೆಯಾಯಿತು. ರಾಮಸ್ವಾಮಿಯವರು ಒಪ್ಪಿಕೊಂಡರು. ಆದರೆ ಸಮಯದಲ್ಲಿ ಇದು ಆಗಲಿಲ್ಲ. ಅವರು ನಂತರದಲ್ಲಿ ಖಾಯಿಲೆಯಾಗಿ ತೀರಿಕೊಂಡರು. ನಂತರ ಕೇಶವಕೃಪಾದಲ್ಲಿ ಅಂತಿಮ ಕಾರ್ಯ ನಡೆಯುವಾಗ ರಾಮಸ್ವಾಮಿಯವರು ಪಂಚೆ ಉತ್ತರೀಯ ಹೊದ್ದು ಬಂದು ನಾಲ್ಕು ಗಂಟೆಗಳ ಕಾಲ ವೇದ ಪಠಣ ಮಾಡಿದರು. ಆ ವ್ಯಕ್ತಿಗೆ ಇವರು ಕೊಟ್ಟ ಮಾತು ತಲುಪಿಸಬೇಕಿತ್ತು, ಆದರೆ ವ್ಯಕ್ತಿಯೇ ಇರಲಿಲ್ಲ, ಆದರೆ ಅವರ ಫೋಟೋದ ಎದುರಿಗೆ ವೇದ ಪಠಣ ಮಾಡಿದರು. ತೀರಿ ಹೋದರೂ ಸಹ ಋಣ ತೀರಿಸುವುದು ಅತ್ಯಂತ ಮಹತ್ವದ ವಿಚಾರ. ಈ ರೀತಿಯ ಗುಣ ರಾಮಸ್ವಾಮಿಯವರಲ್ಲಿ ಇದ್ದದ್ದು. ರಾಮಸ್ವಾಮಿಯವರು ಈಗ ಕಣ್ಣಲ್ಲಿ ನೀರು ತರಿಸಿಕೊಂಡಿದ್ದಾರೆ, ಇದನ್ನು ಕೇಳಿದಾಗ ನನಗೂ ಹೀಗೆ ಕಣ್ಣಲ್ಲಿ ನೀರು ಬಂದಿತ್ತು. ಒಬ್ಬ ಸೃಜನಶೀಲ ಲೇಖಕನಾಗಿ ಬಹಳ ವಿದ್ವತ್ತನ್ನ ಸಂಪಾದನೆ ಮಾಡುವುದಕ್ಕೆ ಸಾಧ್ಯವಿಲ್ಲ. ವಿದ್ವತ್ ಜನರ ಸಂಪರ್ಕವು ಸೃಜನಶೀಲ ಬರಹಗಾರನಿಗೆ ಇರಬೇಕು. ವಿದ್ವತ್ ಜನ ಸೃಜನಶೀಲ ಬರಹಗಾರನಿಗೆ ಬೆನ್ನೆಲುಬಾಗಿ ಇರಬೇಕು." ಎಂದರು.

ನಂತರ ಶತಾವಧಾನಿ ಆರ್. ಗಣೇಶ್, ಟಿ.ವಿ.ವೆಂಕಟಾಚಲ ಶಾಸ್ತ್ರಿಗಳು ಮಾತನಾಡಿದರು. ಕೊನೆಗೆ ಎಸ್.ಆರ್. ರಾಮಸ್ವಾಮಿಯವರು ತಮ್ಮ ಗುರು ಪರಂಪರೆಯನ್ನು ನೆನೆಯುತ್ತಾ ಕೃತಜ್ಞತೆ ಸಲ್ಲಿಸಿದರು.

ಗೋಖಲೆ ಸಂಸ್ಥೆಯ ಕೊರ್ಗಿ ಶಂಕರನಾರಾಯಣ ಉಪಾಧ್ಯಾಯರು, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಸಂಘಚಾಲಕರಾದ ವಿ ನಾಗರಾಜ, ಹಿರಿಯ ಪ್ರಚಾರಕರಾದ ಕಾ.ಶ್ರೀ. ನಾಗರಾಜ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಎಂ.ಬಿ. ಭಾನುಪ್ರಕಾಶ್, ಚಿಂತಕರಾದ ವಿ.ಬಿ. ಆರತಿ, ಪತ್ರಕರ್ತರಾದ ಸೂರ್ಯಪ್ರಕಾಶ್ ಪಂಡಿತ್ ಇನ್ನಿತರರು ಉಪಸ್ಥಿತರಿದ್ದರು.

## ಸಾಲುದ್ದದ ಸುದ್ದಿಗಳು

# ಜೀವನವನ್ನೇ ಸಂಘಮಯ ಮಾಡಿಕೊಂಡಿದ್ದರು ಚಂದ್ರಶೇಖರ ಭಂಡಾರಿಗಳು – ವಿ.ನಾಗರಾಜ

"ಜೀವನವನ್ನೇ ಸಂಘಮಯ ಮಾಡಿಕೊಂಡಿದ್ದರು ಚಂದ್ರಶೇಖರ ಭಂಡಾರಿಗಳು" ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕ್ಷೇತ್ರೀಯ ಸಂಘಚಾಲಕರಾದ ವಿ.ನಾಗರಾಜ ಅವರು ಹಿರಿಯ ಪ್ರಚಾರಕರಾದ ಸ್ವರ್ಗೀಯ ಶ್ರೀ ಚಂದ್ರಶೇಖರ ಭಂಡಾರಿಯವರಿಗೆ ಬೆಂಗಳೂರಿನ ಬಸವನಗುಡಿಯ ಬಿ.ಎಂ.ಎಸ್.ಕಾಲೇಜಿನಲ್ಲಿ ನಡೆದ ಸಭೆಯಲ್ಲಿ ನುಡಿನಮನವನ್ನು ಸಲ್ಲಿಸಿದರು.

ಅವರು ಮುಂದುವರೆದು ಮಾತನಾಡುತ್ತಾ, "ಸಂಘದ ಪ್ರಚಾರಕನೊಬ್ಬ ಸರಳವಾಗಿರಬೇಕು, ಸ್ವಾವಲಂಬಿಯಾಗಬೇಕು ಎನ್ನುವುದು ಚಂದ್ರೂ ಅವರ ಅಂಬೋಣವಾಗಿತ್ತು. ಅವರೊಮ್ಮೆ ಕೇಶವಕೃಪಾದಲ್ಲಿ ಎಂಬತ್ತರ ವಯಸ್ಸಿನಲ್ಲಿ ಬಟ್ಟೆ ಒಗೆದುಕೊಳ್ಳುತ್ತಿದ್ದರು. "ಈಗ ನೀವ್ಯಾಕೆ ಒಗೆಯಬೇಕು ಯಾರಾದ್ರು ಒಗೆದುಕೊಡ್ತಾರೆ ಬಿಡಿ" ಎಂದೆ, ತಮ್ಮ ಎಂದಿನ ಶೈಲಿಯಲ್ಲಿ ಅವರು "ನಾನೊಬ್ಬ ಪ್ರಚಾರಕ್" ಎಂದು ಮುಗುಳ್ನಕ್ಕಿದ್ದರು. ಹೀಗೆ ಸರಳವಾಗಿದ್ದರು, ನಾನು ಎನ್ನುವ ಭಾವನೆಯ ಲವಲೇಶವೂ ಇಲ್ಲದೆ ಬದುಕಿದ್ದವರು ಚಂದ್ರಶೇಖರ ಭಂಡಾರಿಗಳು. ಕವಿಗಳಾಗಿ, ಲೇಖಕರಾಗಿದ್ದವರು, ಶಾರೀರಿಕ ಶಿಕ್ಷಣ ಪಡೆದಿದ್ದರು, ಅದೆಲ್ಲ ತನ್ನ ಉದ್ಧಾರಕ್ಕಾಗಿಯೋ, ತಾವೇನೋ ಆಗಬೇಕಾಗಿಯೋ ಅಲ್ಲ, ಬದಲಾಗಿ ಸಂಘದ ಪ್ರಚಾರಕತನವನ್ನು ನಿಭಾಯಿಸುವುದಕ್ಕಾಗಿ ಮಾತ್ರವೇ, ಈ ಎಲ್ಲ ಗುಣಗಳನ್ನು ಸಂಘಕಾರ್ಯಕ್ಕಾಗಿ ಅಚ್ಚುಕಟ್ಟಾಗಿ ರೂಢಿಸಿಕೊಂಡರು. ಎಂದರು.




ಹಿರಿಯ ಪತ್ರಕರ್ತರಾದ ದು.ಗು.ಲಕ್ಷ್ಮಣ ಅವರು ಮಾತನಾಡಿ, "ಕರ್ನಾಟಕದಲ್ಲಿ ಸಂಘದ ಕಾರ್ಯವನ್ನು ದಾಖಲೀಕರಣ ಮಾಡಿದ್ದರಲ್ಲಿ ಭಂಡಾರಿಗಳದ್ದು ಬಹು ಮುಖ್ಯಪಾತ್ರ, ಗಣಿತ ಶಿಕ್ಷಕರಾದರೂ ಸಾಹಿತ್ಯದಲ್ಲಿ ಅತ್ಯಂತ ಆಸಕ್ತಿ ವಹಿಸಿದರು. ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಅತ್ಯಂತ ಸಮರ್ಥವಾಗಿ ಅನುವಾದ ಮಾಡುವುದನ್ನೂ ಪ್ರಯತ್ನ ಮಾಡಿದರು. ಗಳಗನಾಥರು, ಅ.ನ.ಕೃ, ತರಾಸು ಅವರ ಮೇರು ಸಾಹಿತ್ಯ ಕೃತಿಗಳಿಂದ ಅತ್ಯಂತ ಪ್ರಭಾವಿತರಾಗಿದ್ದರು. ಅಲ್ಲದೆ ತಮ್ಮ ಲೇಖನಿಯಲ್ಲಿ ನಿರಂತರವಾಗಿ ಬರೆಯುತ್ತಲೇ ಹೋದರು. ಒಂದಿಷ್ಟೂ ಸೋಲದೆ, ಸುಸ್ತಾಗದೆ ತಮ್ಮ ಕೊನೆಯ ದಿನಗಳವರೆಗೂ ಬರೆಯುತ್ತಲೇ ಹೋದರು. ಕರ್ನಾಟಕದಲ್ಲಿ ಸಂಘದ ಮೂಲಕ ಆರಂಭವಾದ ಎಲ್ಲ ವೈಚಾರಿಕ ಮುಖವಾಣಿಗಳ ಹಿಂದಿದ್ದವರೂ ಚಂದ್ರೂ ಅವರೇ. ಸಂಘ ಪರಿವಾರದ ಎಲ್ಲ ಮುಖವಾಣಿಗಳಲ್ಲಿ, ಪತ್ರಿಕೆಗಳಲ್ಲಿ ಅವರ ವಿಶೇಷವಾದ ಲೇಖನ ಇದ್ದೇ ಇರುತ್ತಿತ್ತು. ಆದರ್ಶ ಎಂಬುದಕ್ಕೆ ಮತ್ತೊಂದು ಉದಾಹರಣೆ ಅವರೂ ಚಂದ್ರೂ ಅವರೇ" ಎಂದರು.

ನಂತರದಲ್ಲಿ ಜಿ.ಬಿ.ಹರೀಶ್, ಹಿರಿಯ ಪ್ರಚಾರಕರಾದ ಸು.ರಾಮಣ್ಣ ಅವರು ತಮ್ಮ ನುಡಿ ನಮನವನ್ನು ಸಲ್ಲಿಸಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಹ ಸರಕಾರ್ಯವಾಹರಾದ ಶ್ರೀ ಮುಕುಂದ, ಕ್ಷೇತ್ರೀಯ ಪ್ರಚಾರಕರಾದ ಶ್ರೀ ಸುಧೀರ್‌ಜೀ, ಕ್ಷೇತ್ರೀಯ ಕಾರ್ಯವಾಹರಾದ ಶ್ರೀ ತಿಪ್ಪೇಸ್ವಾಮಿಯವರು, ಪ್ರಾಂತ ಪ್ರಚಾರಕರಾದ ಶ್ರೀ ಗುರುಪ್ರಸಾದ್, ಸಹ ಪ್ರಾಂತ ಪ್ರಚಾರಕರಾದ ಶ್ರೀ ನಂದೀಶ್, ಹಿರಿಯ ಸ್ವಯಂಸೇವಕರಾದ ಕಾ.ಶ್ರೀ. ನಾಗರಾಜ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಶ್ರೀ ಭಾನುಪ್ರಕಾಶ್, ಶ್ರೀಮತಿ ಎಸ್.ಆರ್.ಲೀಲಾ, ಭಾರತೀಯ ಜನತಾ ಪಾರ್ಟಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಟಿ. ರವಿ ಮುಂತಾದವರು ಉಪಸ್ಥಿತರಿದ್ದರು.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th NOVEMBER 2022
REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23
FORTNIGHTLY 01-12-2022



## ನೆಟ್ವರ್ಕ್ ರೆಡಿನೆಸ್ ಇಂಡೆಕ್ಸ್ 2022: 6 ಸ್ಥಾನಗಳ ಜಿಗಿತ ಕಂಡ ಭಾರತ




ಇತ್ತೀಚೆಗೆ ಬಿಡುಗಡೆಯಾದ ನೆಟ್ವರ್ಕ್ ರೆಡಿನೆಸ್ ಇಂಡೆಕ್ಸ್ 2022ರಲ್ಲಿ ಭಾರತ 61ನೇ ಸ್ಥಾನ ಪಡೆದುಕೊಂಡಿದೆ. ಹಿಂದಿನ ಆವೃತ್ತಿಗಿಂತ ಆರು ಸ್ಥಾನಗಳ ಸುಧಾರಣೆಯನ್ನು ಕಂಡಿದೆ.

2022ರ ಆವೃತ್ತಿಯಲ್ಲಿ, ವರದಿಯು 131 ಆರ್ಥಿಕತೆಗಳ ನೆಟ್ವರ್ಕ್ ಆಧಾರಿತ ಸನ್ನದ್ಧತೆಯ ಭೂದೃಶ್ಯವನ್ನು ನಾಲ್ಕು ವಿಭಿನ್ನ ಸ್ತಂಭಗಳ ತಂತ್ರಜ್ಞಾನ, ಜನರು, ಆಡಳಿತ ಮತ್ತು ಪ್ರಭಾವದ ಕಾರ್ಯಕ್ಷಮತೆಯನ್ನು ಆಧರಿಸಿ ಮಾಡಲಾಗಿದೆ.

ಭಾರತವು ತನ್ನ ಶ್ರೇಯಾಂಕವನ್ನು ಸುಧಾರಿಸಿದ್ದು ಮಾತ್ರವಲ್ಲದೆ 2021ರಲ್ಲಿ 49.74 ರಿಂದ 2022ರಲ್ಲಿ 51.19ಕ್ಕೆ ತನ್ನ ಸ್ಕೋರ್ ಅನ್ನು ಸುಧಾರಿಸಿದೆ. ಕೃತಕ ಬುದ್ಧಿಮತ್ತೆ ಪ್ರತಿಭಾ ಕೇಂದ್ರೀಕರಣದಲ್ಲಿ ಭಾರತವು 1ನೇ ಶ್ರೇಯಾಂಕವನ್ನು ಪಡೆದುಕೊಂಡಿದೆ ಎಂದು ವರದಿ ಹೇಳುತ್ತದೆ. ದೇಶದಲ್ಲಿ ಮೊಬೈಲ್ ಬ್ರಾಡ್‌ಬ್ಯಾಂಡ್ ಇಂಟರ್ನೆಟ್ ಟ್ರಾಫಿಕ್‌ನಲ್ಲಿ ಎರಡನೇ ಸ್ಥಾನ ಮತ್ತು ಅಂತರರಾಷ್ಟ್ರೀಯ ಇಂಟರ್ನೆಟ್ ಬ್ಯಾಂಡ್ವಿಡ್ತ್, ದೂರಸಂಪರ್ಕ ಸೇವೆಗಳು ಮತ್ತು ದೇಶೀಯ ಮಾರುಕಟ್ಟೆ ಗಾತ್ರದಲ್ಲಿ ವಾರ್ಷಿಕ ಹೂಡಿಕೆಯಲ್ಲಿ ಮೂರನೇ ಶ್ರೇಣಿ, ICT ಸೇವೆಗಳ ರಫ್ತುಗಳಲ್ಲಿ ನಾಲ್ಕನೇ ಶ್ರೇಣಿ, FTTH ಮತ್ತು ಬಿಲ್ಡಿಂಗ್ ಇಂಟರ್ನೆಟ್ ಚಂದಾದಾರಿಕೆಗಳು ಮತ್ತು AI ವೈಜ್ಞಾನಿಕ ಪ್ರಕಟಣೆಗಳಲ್ಲಿ ಐದನೇ ಶ್ರೇಣಿ ಪಡೆದಿದೆ.

ವರದಿಯನ್ನು ಪೋರ್ಟ್‌ಲ್ಯಾಂಡ್ ಇನ್‌ಸ್ಟಿಟ್ಯೂಟ್ ಸಿದ್ಧಪಡಿಸಿದೆ, ಇದು ಸ್ವತಂತ್ರ ಲಾಭರಹಿತ, ಪಕ್ಷಾತೀತ ಸಂಶೋಧನೆ ಮತ್ತು ವಾಷಿಂಗ್ಟನ್ ಡಿಸಿ ಮೂಲದ ಶೈಕ್ಷಣಿಕ ಸಂಸ್ಥೆಯಾಗಿದೆ. ಭಾರತವು ತನ್ನ ಆದಾಯದ ಮಟ್ಟವನ್ನು ಗಮನಿಸಿದರೆ ನಿರೀಕ್ಷಿಸುವುದಕ್ಕಿಂತ ಹೆಚ್ಚಿನ ನೆಟ್ವರ್ಕ್ ಸನ್ನದ್ಧತೆಯನ್ನು ಹೊಂದಿದೆ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಉಕ್ರೇನ್ ಮತ್ತು ಇಂಡೋನೇಷ್ಯಾ ನಂತರ ಕಡಿಮೆ ಮಧ್ಯಮ ಆದಾಯದ ದೇಶಗಳ ಗುಂಪಿನಲ್ಲಿ ದೇಶವು 36ರಲ್ಲಿ ಮೂರನೇ ಸ್ಥಾನದಲ್ಲಿದೆ.

## ವಾರಣಾಸಿ: 'ಕಾಶಿ ತಮಿಳು ಸಂಗಮಂ'ಗೆ ಮೋದಿ ಚಾಲನೆ

காசி தமிழ் சங்கமம்
काशी तमिल संगमम्
KASHI TAMIL SANGAMAM

ವಾರಣಾಸಿಯಲ್ಲಿ ಒಂದು ತಿಂಗಳ ಕಾಲ ನಡೆಯುವ ಕಾಶಿ ತಮಿಳು ಸಂಗಮವನ್ನು ಪ್ರಧಾನಿ ನರೇಂದ್ರ ಮೋದಿ ಇಂದು ಉದ್ಘಾಟಿಸಿದ್ದಾರೆ.

ಕಾಶಿ-ತಮಿಳು ಸಂಗಮಮ್ ಕಾರ್ಯಕ್ರಮವು "ಶತಮಾನಗಳ-ಹಳೆಯ ಜ್ಞಾನದ ಬಂಧ" ಮತ್ತು ಉತ್ತರ ಮತ್ತು ದಕ್ಷಿಣದ ನಡುವಿನ ಪ್ರಾಚೀನ ನಾಗರಿಕತೆಯ ಸಂಬಂಧವನ್ನು ಮರುಶೋಧಿಸುವ ಗುರಿಯನ್ನು ಹೊಂದಿದೆ.

ಭಾರತ ಸರ್ಕಾರದ ಸಹಕಾರದೊಂದಿಗೆ ಉತ್ತರ ಪ್ರದೇಶ ಸರ್ಕಾರದೊಂದಿಗೆ ಕಾರ್ಯಕ್ರಮವನ್ನು ದೊಡ್ಡ ಪ್ರಮಾಣದಲ್ಲಿ ಯೋಜಿಸಲಾಗಿದೆ. ಪ್ರವಾಸಿಗರು ದ್ರಾವಿಡ ಸಂಸ್ಕೃತಿಯ ನೋಟವನ್ನು ಪಡೆಯಬಹುದು ಮತ್ತು ಉತ್ತರ ಪ್ರದೇಶದ ಜನರಿಗೆ ತಮಿಳುನಾಡಿನ ಸಂಸ್ಕೃತಿ, ಪಾಕಪದ್ಧತಿ ಮತ್ತು ಸಂಗೀತವನ್ನು ಪರಿಚಯಿಸಲಾಗುತ್ತದೆ.

ಇದಕ್ಕೂ ಮುನ್ನ ವಾರಾಣಸಿಗೆ ಆಗಮಿಸಿದ ಪ್ರಧಾನಿ ಅವರನ್ನು ಉತ್ತರ ಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಸ್ವಾಗತಿಸಿದರು. ತಮಿಳುನಾಡು ಬಿಜೆಪಿ ಮುಖ್ಯಸ್ಥ ಕೆ. ಅಣ್ಣಾಮಲೈ, ಸಂಗೀತ ಸಂಯೋಜಕ ಇಳಯರಾಜ ಕೂಡ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ಯುಪಿ ಸಿಎಂ ಯೋಗಿ ಆದಿತ್ಯನಾಥ್ ಮಾತನಾಡಿ, "ಕಾಶಿ-ತಮಿಳು ಸಂಗಮಂ ಇಲ್ಲಿ ನಡೆಯುವುದರಿಂದ, ಭೇಟಿ ನೀಡುವ ಜನರಿಗೆ ಸಮೃದ್ಧ ಸಾಂಸ್ಕೃತಿಕ ಪರಂಪರೆಯನ್ನು ಪರಿಚಯಿಸುವುದು ಮಾತ್ರವಲ್ಲದೆ ಪ್ರಾಚೀನ ಸಾಂಸ್ಕೃತಿಕ ಏಕತೆಯನ್ನು ಪರಿಚಯಿಸಲಾಗುವುದು" ಎಂದಿದ್ದಾರೆ.

ತಮಿಳುನಾಡಿನ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರದರ್ಶಿಸುವ ಸುಮಾರು 75 ಮಳಿಗೆಗಳನ್ನು ವಾರಣಾಸಿಯ BHUನ ಆಂಫಿಥಿಯೇಟರ್ ಮೈದಾನದಲ್ಲಿ ಹಾಕಲಾಗುತ್ತಿದೆ, ಇದು ತಮಿಳುನಾಡಿನ ಉತ್ಪನ್ನಗಳು, ಕರಕುಶಲ ವಸ್ತುಗಳು ಮತ್ತು ಕೈಮಗ್ಗಗಳನ್ನು ಪ್ರದರ್ಶಿಸುತ್ತದೆ. ಇದರೊಂದಿಗೆ ಸ್ವಾತಂತ್ರ್ಯ ಹೋರಾಟಗಾರರ ಹೋರಾಟ ಬಿಂಬಿಸುವ ವಸ್ತುಪ್ರದರ್ಶನವನ್ನೂ ಆಯೋಜಿಸಲಾಗುತ್ತಿದೆ.

## ನ್ಯೂಜಿಲ್ಯಾಂಡ್ ಹಿಂದೂ ನೇತೃತ್ವದಲ್ಲಿ 4ನೇ ವಿಶ್ವ ಹಿಂದೂ ಯುವ ಸಮ್ಮೇಳನ

4ನೇ ವಿಶ್ವ ಹಿಂದೂ ಯುವ ಸಮ್ಮೇಳನವು ಮುಂಬೈನಲ್ಲಿ ಡಿಸೆಂಬರ್ 27 ರಿಂದ 29 ರವರೆಗೆ ನಡೆಯಲಿದೆ. ಹಿಂದೂ ಸ್ಟುಡೆಂಟ್ಸ್ & ಯುವ ನೆಟ್ವರ್ಕ್ ಈ ಸಮ್ಮೇಳನವನ್ನು ಆಯೋಜಿಸಲಿದೆ. ಹಿಂದೂ ಸ್ಟುಡೆಂಟ್ಸ್ & ಯುವ ನೆಟ್ವರ್ಕ್ ಯುವಜನರಲ್ಲಿ ನಾಯಕತ್ವದ ಸಾಮರ್ಥ್ಯವನ್ನು ನಿರ್ಮಿಸುವ ವೇದಿಕೆಯಾಗಿದ್ದು, ಬಹು-ಶಿಸ್ತಿನ ಕ್ಷೇತ್ರಗಳಲ್ಲಿ ಯುವಕರಿಗೆ ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸಲು ಅನುವು ಮಾಡಿಕೊಡುತ್ತದೆ. ಯುವ ಸಾಧಕರು, ಕಾರ್ಯಕರ್ತರು, ನಾಯಕರು, ಶಿಕ್ಷಣ ತಜ್ಞರು ಮತ್ತು ಚಿಂತನೆಯುಳ್ಳ ನಾಯಕರನ್ನು ಪ್ರೇರೇಪಿಸಲು ಇದು ಅವಕಾಶವನ್ನು ಒದಗಿಸುವ ಗುರಿಯನ್ನು ಹೊಂದಿದೆ. ಇದು ಕಲಿಕೆ, ಸ್ಫೂರ್ತಿ ಮತ್ತು ಪ್ರೇರಣೆಯನ್ನು ನೀಡುತ್ತದೆ.

15 ರಿಂದ 35 ವರ್ಷ ವಯಸ್ಸಿನ ಹಿಂದೂ ಯುವಕರನ್ನು 21ನೇ ಶತಮಾನದ ಸವಾಲುಗಳನ್ನು ಉತ್ತಮವಾಗಿ ಎದುರಿಸಲು ಸಿದ್ಧಪಡಿಸುವುದು ಈ ಸಮ್ಮೇಳನದ ಗುರಿಯಾಗಿದೆ. ಈ ವಯಸ್ಸಿನ ಗುಂಪಿನಲ್ಲಿನ ಶಕ್ತಿ ಮತ್ತು ಉತ್ಸಾಹವು ಕ್ರಿಯಾತ್ಮಕವಾಗಿರುವ ಕಾರಣ ಹೆಚ್ಚು ಸಮರ್ಥ ಜಾಗತಿಕ ಹಿಂದೂ ಸಮುದಾಯದ ಕಡೆಗೆ ಧನಾತ್ಮಕ ಚಲನೆಗಳನ್ನು ರಚಿಸುವತ್ತ ಇದು ಕೆಲಸ ಮಾಡಲಿದೆ. ಈ ಸಮ್ಮೇಳನವನ್ನು ಸಂಘಟಿಸಲು ನ್ಯೂಜಿಲೆಂಡ್ ಮೂಲದ ಹಿಂದೂ ಯುವಕ ಮುರಳಿ ಕೃಷ್ಣ ಮಗೇಸನ್ ಅವರನ್ನು ಆಹ್ವಾನಿಸಲಾಗಿದೆ. ಭಾರತದಿಂದ ರಾಮದಾಸ್ ತಿವಾರಿ ಅವರು ಸಮ್ಮೇಳನದ ಜಂಟಿ ಸಂಯೋಜಕರಾಗಿರುತ್ತಾರೆ.



ಮುರಳಿ ಕೃಷ್ಣ ಮ್ಯಾಗೇಸನ್ ಅವರು ಹಿಂದೂ ಯುವ ನ್ಯೂಜಿಲೆಂಡ್ ಸಂಘಟನೆ ಅಧ್ಯಕ್ಷರಾಗಿದ್ದಾರೆ ಮತ್ತು ಯುವ ಸಲಹಾ ಸಮಿತಿಯ ಸಹ-ಅಧ್ಯಕ್ಷರಾಗಿದ್ದರು. ನ್ಯೂಜಿಲೆಂಡ್‌ನಲ್ಲಿ ಧರ್ಮಫೆಸ್ಟ್, ನ್ಯೂಜಿಲೆಂಡ್ ಹಿಂದೂ ಯುವ ಸಮ್ಮೇಳನ, ಮಾರೇ ಸ್ಟೇ ಇತ್ಯಾದಿಗಳನ್ನು ಒಳಗೊಂಡಂತೆ ಯಶಸ್ವಿ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಅವರು ಸಾಕಷ್ಟು ಅನುಭವವನ್ನು ಹೊಂದಿದ್ದಾರೆ.

## ಹೊಸ ಅಧ್ಯಾಯ ಆರಂಭ: ಇಸ್ರೋದಿಂದ ಮೊದಲ ಖಾಸಗಿ ರಾಕೆಟ್ ಯಶಸ್ವಿ ಉಡಾವಣೆ



ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಇಂದು ಆಂಧ್ರಪ್ರದೇಶದ ಶ್ರೀಹರಿಕೋಟಾದಿಂದ ಮೊದಲ ಖಾಸಗಿಯಾಗಿ ಅಭಿವೃದ್ಧಿಪಡಿಸಿದ ರಾಕೆಟ್ ಅನ್ನು ಉಡಾವಣೆ ಮಾಡುವ ಮೂಲಕ ಇತಿಹಾಸ ನಿರ್ಮಾಣ ಮಾಡಿದೆ.

ಬಾಹ್ಯಾಕಾಶ ಕ್ಷೇತ್ರದಲ್ಲಿ ಭಾರತದ ಮಹತ್ವದ ಹೆಜ್ಜೆ ಇದಾಗಿರುವುದರಿಂದ ಉಡಾವಣೆಯು ಇತಿಹಾಸವನ್ನು ನಿರ್ಮಿಸಿದೆ, ಖಾಸಗಿ ವಲಯದೊಂದಿಗೆ ಇಸ್ರೋದ ಸಂಬಂಧವನ್ನು ಇದು ಬೆಳೆಸಲಿದೆ.

ವಿಕ್ರಮ್-ಸಬ್‌ಆರ್ಬಿಟಲ್ (ವಿಕೆಎಸ್) ರಾಕೆಟ್‌ನ ಐತಿಹಾಸಿಕ ಚೊಚ್ಚಲ ಖಾಸಗಿ ಉಡಾವಣೆಯನ್ನು ಶ್ರೀಹರಿಕೋಟಾದಲ್ಲಿ ವಿಜ್ಞಾನ, ತಂತ್ರಜ್ಞಾನ ಮತ್ತು ಬಾಹ್ಯಾಕಾಶ ಸಚಿವ ಡಾ. ಜಿತೇಂದ್ರ ಸಿಂಗ್ ಅವರ ಸಮ್ಮುಖದಲ್ಲಿ ನೆರವೇರಿಸಲಾಯಿತು.

ಸರ್ಕಾರೇತರ ಘಟಕ ಮತ್ತು ಸ್ಟಾರ್ಟ್‌ಅಪ್ ಆದ ಹೈದರಾಬಾದ್ ಮೂಲದ ಸ್ಕೈರೂಟ್ ಏರೋಸ್ಪೇಸ್ ಪ್ರೈವೇಟ್ ಲಿಮಿಟೆಡ್ ವಿಕೆಎಸ್ ರಾಕೆಟ್ ಅನ್ನು ಅಭಿವೃದ್ಧಿಪಡಿಸಿದೆ. ಇದು ಸುಮಾರು 550 ಕಿಲೋಗ್ರಾಂಗಳಷ್ಟು ದ್ರವ್ಯರಾಶಿಯನ್ನು ಹೊಂದಿರುವ ಏಕ ಹಂತದ ಸ್ಪಿನ್ ಸ್ಟೆಬಿಲೈಸ್ಡ್ ಘನ ಪ್ರೊಪೆಲ್ಲಂಟ್ ರಾಕೆಟ್ ಆಗಿದೆ. ರಾಕೆಟ್ ಗರಿಷ್ಠ 101 ಕಿಲೋಮೀಟರ್ ಎತ್ತರಕ್ಕೆ ಹೋಗಿ ಸಮುದ್ರಕ್ಕೆ ಚಿಮ್ಮಿದೆ. ಉಡಾವಣೆಯ ಒಟ್ಟಾರೆ ಅವಧಿಯು 300 ಸೆಕೆಂಡುಗಳು ಎಂದು ಇಸ್ರೋ ಹೇಳಿದೆ.



## ಶೀಘ್ರದಲ್ಲೇ ಎಲ್ಪಿಜಿ ಸಿಲಿಂಡರ್‌ಗಳು ಕ್ಯೂಆರ್ ಕೋಡ್ ಹೊಂದಲಿವೆ

ಎಲ್ಪಿಜಿ (Liquefied Petroleum Gas) ಸಿಲಿಂಡರ್‌ಗಳು ಶೀಘ್ರದಲ್ಲೇ QR ಕೋಡ್ ಸೌಲಭ್ಯವನ್ನು ಹೊಂದಲಿದೆ. ಇದು ಗೃಹಬಳಕೆಯ ಸಿಲಿಂಡರ್‌ಗಳನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ.

ಈ ಕ್ಯೂಆರ್ ಕೋಡ್ ಅನ್ನು ಈಗಿರುವ ಸಿಲಿಂಡರ್‌ಗಳ ಮೇಲೆ ಅಂಟಿಸಲಾಗುತ್ತದೆ ಮತ್ತು ಹೊಸ ಸಿಲಿಂಡರ್‌ಗಳ ಮೇಲೆ ವೆಲ್ಡ್ ಮಾಡಲಾಗುತ್ತದೆ ಎಂದು ಕೇಂದ್ರ ಪೆಟ್ರೋಲಿಯಂ ಸಚಿವ ಹರ್ದೀಪ್ ಸಿಂಗ್ ಪುರಿ ಹೇಳಿದ್ದಾರೆ. ಕೋಡ್ ಅನ್ನು ಸಕ್ರಿಯಗೊಳಿಸುವುದರಿಂದ ಅನಿಲದ ಕಳ್ಳತನ ತಡೆಯಬಹುದು. ಅಲ್ಲದೇ ಅದರ ಟ್ರಾಕಿಂಗ್ ಮತ್ತು ಟ್ರೇಸಿಂಗ್ ಸುಲಭವಾಗುತ್ತದೆ. ಗ್ಯಾಸ್ ಸಿಲಿಂಡರ್‌ಗಳ ಉತ್ತಮ ದಾಸ್ತಾನು ನಿರ್ವಹಣೆಗೆ ಇರುವ ಹಲವಾರು ಸಮಸ್ಯೆಗಳನ್ನು ಪರಿಹರಿಸಲು ಸಹಾಯವಾಗುತ್ತದೆ ಎಂದು ಪುರಿ ಹೇಳಿದ್ದಾರೆ.

ಈ ಬಗ್ಗೆ ಮಾತನಾಡಿದ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ ಅಧ್ಯಕ್ಷ ಶ್ರೀಕಾಂತ್ ಮಾಧವ್ ವೈದ್ಯ, ಪ್ರಸ್ತುತ ದೆಹಲಿಯ ಒಂದು ಪ್ರದೇಶದಲ್ಲಿ ಇದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಲಾಗುತ್ತಿದೆ ಮತ್ತು ಮುಂದಿನ 3–6 ತಿಂಗಳೊಳಗೆ ದೇಶೀಯ ಎಲ್ಪಿಜಿ ಸಿಲಿಂಡರ್‌ಗಳು ಕ್ಯೂಆರ್ ಕೋಡ್‌ಗಳನ್ನು ಹೊಂದಿರುತ್ತದೆ ಎಂದು ನಿರೀಕ್ಷಿಸಲಾಗಿದೆ ಎಂದಿದ್ದಾರೆ. ಕ್ಯೂಆರ್ ಕೋಡ್ ಮೂಲಕ ಗ್ರಾಹಕರು ಸಿಲಿಂಡರ್‌ಗಳನ್ನು ಎಲ್ಲಿ ತುಂಬಿಸಲಾಗಿದೆ ಎಂಬ ಮಾಹಿತಿಯನ್ನು ಪಡೆಯಬಹುದು ಎಂದು ಅವರು ಹೇಳಿದ್ದಾರೆ.

ಓದುಗರೇ ಗಮನಿಸಿ
ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.